ಶ್ರೀ ದೇವೀ–ಸ್ತೋತ್ರ–ಮಾಲಾ

ಸಂಗ್ರಹ ಮತ್ತು ಅನುವಾದ

ವಿದ್ವಾನ್ ಎನ್. ರಂಗನಾಥ ಶರ್ಮಾ

ಅದ್ವೈತ ವಿದ್ಯಾ ಪ್ರತಿಷ್ಠಾನ

ಶ್ರೀ ಕೋದಂಡಾಶ್ರಮ ಮಠ, **ಹೆಬ್ಬೂರು**

ತುಮಕೂರು ಜಿಲ್ಲೆ

ಶ್ರೀ ದೇವೀ-ಸ್ತೋತ್ರ-ಮಾಲಾ

ಸಂಗ್ರಹ ಮತ್ತು ಅನುವಾದ

ವಿದ್ವಾನ್ ಎನ್. ರಂಗನಾಥ ಶರ್ಮಾ

ACADEMY OF ADVAITHA STUDIES
ओम्
॥ सर्वं खल्विदं ब्रह्म ॥
अद्वैत-विद्या-प्रतिष्ठानम्
ಅದ್ವೈತ ವಿದ್ಯಾ ಪ್ರತಿಷ್ಠಾನ

ಅದ್ವೈತ ವಿದ್ಯಾ ಪ್ರತಿಷ್ಠಾನ
ಶ್ರೀ ಕೋದಂಡಾಶ್ರಮ ಮಠ
ಹೆಬ್ಬೂರು, ತುಮಕೂರು ಜಿಲ್ಲೆ

SRI DEVI-STOTRA-MALA : Sanskrit Devotional Lyrics on the Goddess, selected and translated into Kannada by Vidwan N. Ranganatha Sharma, 831, 4th Main Road, Vijayanagar, **BANGALORE-560 040**

© Academy of Advaitha Studies

Pages : 56

Price : Rupees Fifteen

First Edition : 1999

Published by :
ACADEMY OF ADVAITHA STUDIES
SRI KODANDASHRAMA MUTT
HEBBUR-572 120
TUMKUR DISTRICT
KARNATAKA, INDIA

Copies also available at :
VEDANTA BOOK HOUSE
92, 6th Main, Chamarajapet
BANGALORE-560 018
Phone : (080)-6507590

Printed at :
Parimala Mudranalaya
II Main, Mount Joy Extension
Hanumanthanagar
BANGALORE-560 019
Ph. : 080-6525516

ಶ್ರೀ ಕೋದಂಡಾಶ್ರಮ ಮಠ, ಹೆಬ್ಬೂರು

ಸ್ವಸ್ತಿವಾಚನ

ಉತ್ತಮವಾದ ಜನ್ಮವುಳ್ಳ ಮಾನವನ ಸದ್ಗತಿ ಸಂಪಾದನೆಗೆ ಅನೇಕ ಸಾಧನೆಗಳಿದ್ದರೂ, ಈ ಕಲಿಯುಗದಲ್ಲಿ ಶಕ್ತಿ ಮತ್ತು ಗಣಪತಿ ಇವುಗಳ ಆರಾಧನೆಯು ಕ್ಷಿಪ್ರ ಫಲ ನೀಡುವಂತಹುದು ಎಂದು ಆಸ್ತಿಕ ಜನರ ನಂಬಿಕೆ. ಜನರು ಬಗೆಬಗೆಯ ರೀತಿಯಲ್ಲಿ ಈ ದೇವತೆಗಳನ್ನು ಸ್ತುತಿಸಿ ಸೇವೆಗೈಯುತ್ತಿರುವುದು ಸರ್ವವಿದಿತ.

ಸಂಸ್ಕೃತ ವಾಙ್ಮಯದಲ್ಲಿ ಸ್ತೋತ್ರ ಸಾಹಿತ್ಯ ವಿಪುಲವಾಗಿದ್ದು ಅತ್ಯಂತ ಜನಾದರಣೀಯವಾಗಿದೆ. ದೈವಶ್ರದ್ಧೆಯಿರುವ ಜನಸಾಮಾನ್ಯರಿಗೂ ಪಠಿಸಲು ಅನುಕೂಲವಾಗುವಂತೆ ದೇವೀಪರವಾದ ಕೆಲವು ದಂಡಕ ಮತ್ತು ಸ್ತೋತ್ರಗಳನ್ನು ಸಂಗ್ರಹಿಸಿ ಹೆಬ್ಬೂರಿನ ಅದ್ವೈತ ವಿದ್ಯಾ ಪ್ರತಿಷ್ಠಾನವು ''ಶ್ರೀ ದೇವೀ ಸ್ತೋತ್ರಮಾಲಾ'' ಎಂಬ ಕಿರುಹೊತ್ತಗೆಯನ್ನು ಪ್ರಕಟಿಸುತ್ತಿರುವುದು ಸ್ತುತ್ಯವಾಗಿದೆ. ಈ ಸ್ತೋತ್ರಗಳಿಗೆ ನಮ್ಮ ರಾಜ್ಯದ ಸುಪ್ರಸಿದ್ಧ ಸಂಸ್ಕೃತ ವಿದ್ವಾಂಸರಾದ ಶ್ರೀ ಎನ್. ರಂಗನಾಥ ಶರ್ಮರವರ ಸಂಕ್ಷೇಪ ವಾದ ಕನ್ನಡ ಭಾವಾನುವಾದವು ಪುಸ್ತಕದ ಉಪಯುಕ್ತತೆಯನ್ನು ಹೆಚ್ಚಿಸಿದೆ. ವಿಶೇಷತಃ ಈ ವಿದ್ವಾಂಸರು ಶ್ರೀ ಶ್ಯಾಮಲಾ ದಂಡಕಕ್ಕೆ ಕನ್ನಡದ ಭಾವಾರ್ಥವನ್ನು ದಂಡಕ ರೂಪದಲ್ಲಿಯೇ ರಚಿಸಿರುವುದು ಗಮನಾರ್ಹ.

ಆಸ್ತಿಕರೆಲ್ಲರೂ, ಅರ್ಥಾನುಸಂಧಾನದೊಡನೆ ಈ ಪುಸ್ತಕದಲ್ಲಿರುವ ಸ್ತೋತ್ರಗಳನ್ನು ಪಠಿಸಿ ಈ ಕೃತಿಯ ಸದುಪಯೋಗ ಮಾಡಿಕೊಂಡು ಶ್ರೇಯೋಭಾಗಿಗಳಾಗಲೆಂದು ಹರಸುತ್ತೇವೆ.

ಪ್ರಮಾಥಿ ಸಂ||
ಆಶ್ವಯುಜ ಕೃಷ್ಣ ತ್ರಯೋದಶಿ
ಮೊಕ್ಕಾಂ : ಬೆಂಗಳೂರು
5.11.1999

ಇತಿ ನಾರಾಯಣ ಸ್ಮರಣೆಗಳು

ಶ್ರೀ ಶ್ರೀ ನಾರಾಯಣಾಶ್ರಮ ಸ್ವಾಮಿಗಳು

ಶ್ರೀ ಕೋದಂಡಾಶ್ರಮ ಮಠ, ಹೆಬ್ಬೂರು

ಪ್ರತಿಷ್ಠಾನದ ಅಧ್ಯಕ್ಷರ ನುಡಿ

ಶೃಂಗೇರಿಯ ಪೀಠಾಧಿಪತಿಗಳಾಗಿರುವ ಪರಮ ಪೂಜ್ಯ ಶ್ರೀ ಶ್ರೀ ಭಾರತೀತೀರ್ಥ ಮಹಾಸ್ವಾಮಿಗಳವರ ಆಶೀರ್ವಾದ ಅನುಗ್ರಹ ಸಲಹೆ ಸಹಕಾರ ಹಾಗೂ ಹೆಬ್ಬೂರಿನ ಶ್ರೀ ಕೋದಂಡಾಶ್ರಮ ಮಠಾಧೀಶರಾದ ಪರಮಪೂಜ್ಯ ಶ್ರೀ ಶ್ರೀ ನಾರಾಯಣಾಶ್ರಮ ಸ್ವಾಮಿಗಳವರ ಬೆಂಬಲ ಮತ್ತು ಪ್ರಧಾನ ಪೋಷಕತ್ವದಲ್ಲಿ ಸ್ಥಾಪಿತಗೊಂಡಿರುವ ಅದ್ವೈತ ವಿದ್ಯಾಪ್ರತಿಷ್ಠಾನವು ಈಗಾಗಲೇ ಎರಡು ಪ್ರಕಟಣೆಗಳನ್ನು ಪ್ರಕಾಶನ ಗೊಳಿಸಿ, ಮೂರನೆಯದಾಗಿ ಈಗ ''ಶ್ರೀ ದೇವೀ ಸ್ತೋತ್ರಮಾಲಾ'' ಎಂಬ ದೇವೀಪರವಾದ ಸ್ತೋತ್ರಗಳ ಸಂಕಲನದ ಕಿರುಹೊತ್ತಗೆಯನ್ನು ಪ್ರಕಟಗೊಳಿಸಲು ಸಂತೋಷಿಸುತ್ತದೆ. ಈ ಪುಸ್ತಕದಲ್ಲಿ ಸೇರಿಸಿರುವ ಕೆಲವು ಪ್ರಸಿದ್ಧವಾದ ದಂಡಕ ಹಾಗೂ ಸ್ತೋತ್ರಗಳಿಗೆ ನಮ್ಮ ನಾಡಿನ ಸಂಸ್ಕೃತಜ್ಞ ರಲ್ಲಿ ಪ್ರಸಿದ್ಧರಾದ ಮತ್ತು ನಮ್ಮ ವಿಶ್ವಸ್ತ ಮಂಡಳಿಯ ಸದಸ್ಯರಲ್ಲಿ ಒಬ್ಬರಾದ ವಿದ್ವಾನ್ ಎನ್. ರಂಗನಾಥ ಶರ್ಮಾರವರು ಸಂಕ್ಷೇಪವಾಗಿ ಕನ್ನಡ ಭಾವಾನುವಾದ ಮಾಡಿಕೊಟ್ಟು ಮಹದುಪಕಾರ ಮಾಡಿದ್ದಾರೆ. ಅವರಿಗೆ ಪ್ರತಿಷ್ಠಾನವು ಆಭಾರಿಯಾಗಿದೆ.

ಈ ಪುಸ್ತಕವನ್ನು ಪ್ರಕಾಶನಗೊಳಿಸಲು ಅನುಗ್ರಹಾಶೀರ್ವಾದ ನೀಡಿರುವ ಪರಮಪೂಜ್ಯ ಶ್ರೀ ಶ್ರೀ ನಾರಾಯಣಾಶ್ರಮ ಸ್ವಾಮಿಗಳವರಿಗೆ ಶತನತಿಗಳು ಸಲ್ಲುತ್ತವೆ. ಇದರ ಮುದ್ರಣಕ್ಕೆ 25,000/–ರೂ.ಗಳ ಕೊಡುಗೆ ನೀಡಿರುವ ಹೆಬ್ಬೂರಿನ ಶ್ರೀ ಕಾಮಾಕ್ಷೀ ಶಾರದಾಂಬಾ ಟ್ರಸ್ಟಿಗೆ ನಮ್ಮ ಅನಂತ ಕೃತಜ್ಞತೆಗಳು.

ಈ ಪುಸ್ತಕವನ್ನು ಅಲ್ಪ ಸಮಯದಲ್ಲಿ ಅಂದವಾಗಿ ಮುದ್ರಿಸಿ ಕೊಟ್ಟಿರುವ ಪರಿಮಳ ಮುದ್ರಣಾಲಯದವರಿಗೆ ವಂದನೆಗಳು.

ಸಹೃದಯರಾದ ಕನ್ನಡ ಬಾಂಧವರು ಈ ಪುಸ್ತಕದ ಸದುಪಯೋಗ ಪಡೆಯುವರೆಂದು ನಮ್ಮ ನಂಬಿಕೆ.

ಬೆಂಗಳೂರು **ಎಸ್. ರಾಮನಾಥನ್**

6.11.1999 ಅಧ್ಯಕ್ಷರು

ಅರಿಕೆ

ಆಕರ ಗ್ರಂಥ, ಸಂದರ್ಭ ಗ್ರಂಥ, ಕೋಶಗಳು, ಉನ್ನತ ಅಧ್ಯಯನ, ಸಂಶೋಧನೆ, ತುಲನಾತ್ಮಕ ಉದ್ಗ್ರಂಥಗಳ ರಚನೆಯೇ ಮೊದಲಾದ ಏಕವ್ಯಕ್ತಿ ಸಾಧ್ಯವಲ್ಲದ ಮತ್ತು ಹಲವರ ಸಹಕಾರದಿಂದಲೇ ಆಗಬೇಕಾದ ದೊಡ್ಡ ಯೋಜನೆಗಳನ್ನು ಕೈಗೊಳ್ಳುವುದು ಅಕಾಡೆಮಿಯಂತಹ ವಿದ್ವತ್ ಪರಿಷತ್ತು ಪ್ರತಿಷ್ಠಾನಗಳ ಕರ್ತವ್ಯ. ಆದರೆ ಇಂತಹ ಕೆಲಸಗಳು ಹೆಚ್ಚಿನ ಸಮಯವನ್ನು ಅಪೇಕ್ಷಿಸುತ್ತವೆ. ಆರ್ಥಿಕವಾಗಿ ಬಲಿಷ್ಠವಾಗದೇ ಇಂಥ ಸಾಹಸಗಳನ್ನು ಏಕಾಏಕಿಯಾಗಿ ಕೈಗೆತ್ತಿಕೊಳ್ಳುವಂತಿಲ್ಲ. ಅಷ್ಟೆಲ್ಲ ಆಗುವವರೆಗೆ ಸುಮ್ಮನೆ ಕೂರುವುದೂ ತರವಲ್ಲ. ಅಲ್ಲದೇ ಉದ್ಗ್ರಂಥಗಳೆಲ್ಲವೂ ಕೆಲವೇ ಆಸಕ್ತ ಜಿಜ್ಞಾಸುಗಳ ಉಪಯೋಗಕ್ಕೆ ಬರುವಂಥವು. ಶ್ರೀ ಸಾಮಾನ್ಯರಿಗೆ ಅವುಗಳಿಂದ ನೇರ ಪ್ರಯೋಜನವಾಗುವುದು ಸೀಮಿತ ಪ್ರಮಾಣದಲ್ಲಿಯೇ. ಹೆಚ್ಚಿನ ಪ್ರಮಾಣದಲ್ಲಿರುವ ಸಾಮಾನ್ಯ ಓದುಗರಿಗೆ ಸಹಾಯಕವಾಗುವ ಲಘುಗ್ರಂಥಗಳ ಪ್ರಕಟಣೆಯೂ ಒಂದು ಪ್ರಮುಖ ಕಾರ್ಯವೇ ಸರಿ.

ಅದ್ವೈತ ವೇದಾಂತವನ್ನು ಜನರಿಗೆ ತಲುಪಿಸುವ ಘನ ಉದ್ದೇಶದಿಂದ ಇತ್ತೀಚೆಗೆ ಹೆಬ್ಬೂರಿನಲ್ಲಿ ಸ್ಥಾಪಿತವಾಗಿರುವ ಅದ್ವೈತ ವಿದ್ಯಾ ಪ್ರತಿಷ್ಠಾನವು ಈ ಕಾರಣದಿಂದಲೇ ಕೆಲವು ಪುಟ್ಟ ಪುಸ್ತಕಗಳನ್ನು ಪ್ರಕಟಿಸಲಾರಂಭಿಸಿದೆ. ಪ್ರಕೃತ 'ಶ್ರೀ ದೇವೀ ಸ್ತೋತ್ರಮಾಲಾ' ಎಂಬ ಗ್ರಂಥದಲ್ಲಿ ಏಳು ಪ್ರಸಿದ್ಧ ಸ್ತೋತ್ರಗಳಿವೆ. ಮೊದಲನೆಯದು 'ದೇವೀ ಸ್ತೋತ್ರ' ಎಂದು ಜನಪ್ರಿಯವಾಗಿರುವ ದೇವತಾಸ್ತುತಿ. ಎರಡನೆಯದು ಮಹಾಕವಿ ಕಾಲಿದಾಸನು ಬರೆದಿರುವನೆಂದು ಪ್ರಥಿತವಾಗಿರುವ ಶ್ರೀ ಶ್ಯಾಮಲಾ ದಂಡಕ. ಮೂರನೆಯದಾದ ಶ್ರೀ ಶ್ಯಾಮಲಾ ನವರತ್ನ ಮಾಲಿಕೆಯನ್ನು ಶ್ರೀ ಶಂಕರಾಚಾರ್ಯರು ಬರೆದದ್ದೆಂದು ನಂಬಲಾಗಿದೆ. ಶೃಂಗೇರಿಯ ಪೀಠಾಧಿಪತಿಗಳಾಗಿದ್ದು ಮಹಾಮಹಿಮರೆಂದು ಖ್ಯಾತರಾಗಿರುವ ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು ಬರೆದಿರುವ ಶ್ರೀ ಶಾರದಾ ದಂಡಕವು ನಾಲ್ಕನೆಯದು. ದೇವ್ಯಪರಾಧ ಕ್ಷಮಾಪಣಾ ಸ್ತೋತ್ರದ

ಕರ್ತೃತ್ವವು ಶಂಕರಾಚಾರ್ಯರದೇ. ಶ್ರೀ ಕಮಲಜ ದಯಿತಾಷ್ಟಕವನ್ನು ಬರೆದವರು ಶೃಂಗೇರಿಯ ಪೀಠಾಧಿಪತಿಗಳಾಗಿದ್ದ ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಸ್ವಾಮಿಗಳು. ಕೊನೆಯ ಸ್ತೋತ್ರವು ಕಾಮಾಕ್ಷಿಯನ್ನು ಕುರಿತದ್ದು. ಇದನ್ನು ಮೂಕ ಕವಿಯ ಕಾವ್ಯದಿಂದ ಆಯ್ದುಕೊಳ್ಳಲಾಗಿದೆ.

ದೇವಿಯನ್ನು ಕುರಿತ ಕೆಲವು ಸ್ತೋತ್ರಗಳನ್ನು ಪ್ರಕಟಿಸಬೇಕೆಂದು ತೀರ್ಮಾನಿಸಿದ ಮೇಲೆ ಪ್ರತಿಷ್ಠಾನದವರು ಅದನ್ನು ಕನ್ನಡಿಸುವ ಕೆಲಸವನ್ನು ನನಗೆ ವಹಿಸಿದರು. ದೈಹಿಕ ಶಕ್ತಿಯು ಕುಂಠಿತವಾಗು ತ್ತಿರುವ ಈ ಸ್ಥಿತಿಯಲ್ಲಿ ನಾನು ಪೂಜ್ಯ ಸ್ವಾಮಿಗಳ ಆಗ್ರಹಕ್ಕೆ ಮಣಿದು ಕೈಲಾಗುವ ಪ್ರಯತ್ನ ಮಾಡಲು ಒಪ್ಪಿಕೊಂಡೆ. ಅದರಲ್ಲಿ ಶ್ಯಾಮಲಾ ದಂಡಕದ ಅನುವಾದವು ಈ ಹಿಂದೆಯೇ ನಾನು ಯಾವಾಗಲೋ ಬರೆದಿಟ್ಟಿದ್ದು ಅಚ್ಚಾಗಿರಲಿಲ್ಲ. ಅದನ್ನು ಇಂದಿನ ಕನ್ನಡದ ಗದ್ಯ ಶೈಲಿಗೆ ಮಾರ್ಪಡಿಸಲು ವ್ಯವಧಾನವಾಗಲಿಲ್ಲ ವಾದ್ದರಿಂದ ಇದ್ದ ರೂಪದಲ್ಲಿಯೇ ನೀಡಿದ್ದೇನೆ. ಮೊದಲಿನ ದೇವೀ ಸ್ತೋತ್ರವು ಸುಲಭವಾಗಿರುವುದರಿಂದಲೂ ಮತ್ತು ಅದೇ ಪದಪುಂಜಗಳನ್ನು ಪುನಃ ಪುನಃ ಬರೆಯುವುದರ ಆವಶ್ಯಕತೆ ಅಷ್ಟಾಗಿ ಇಲ್ಲದ್ದರಿಂದಲೂ ಅದನ್ನು ಕನ್ನಡಿಸಿಲ್ಲ. ಶ್ರೀ ಶ್ಯಾಮಲಾ ನವರತ್ನ ಮಾಲಿಕಾ ಮತ್ತು ದೇವ್ಯಪರಾಧಕ್ಷಮಾಪಣ ಸ್ತೋತ್ರಗಳು ಶ್ರೀ ಶಂಕರಾಚಾರ್ಯರ ಹೆಸರಿನಲ್ಲಿಯೇ ಪ್ರಸಿದ್ಧವಾಗಿವೆ. ಶ್ರೀ ಕಮಲಜದಯಿತಾಷ್ಟಕವು ಶಾರದೆಯನ್ನು ಕುರಿತ ಸ್ತೋತ್ರ. ಹೆಬ್ಬೂರಿನ ದೇವತೆಗೆ ಕಾಮಾಕ್ಷಿ ಎಂಬ ಹೆಸರೂ ಇರುವುದರಿಂದ ಮೂಕ ಕವಿಯ ಕಾಮಾಕ್ಷೀ ಸ್ತೋತ್ರವನ್ನು ಇಲ್ಲಿ ಸೇರಿಸಿರುವುದು ಉಚಿತವಾಗಿಯೇ ಇದೆ.

ಶ್ರೀ ಶ್ಯಾಮಲಾ ದಂಡಕ ಮತ್ತು ಶ್ರೀ ಶಾರದಾ ದಂಡಕ ಇವೆರಡೂ ದಂಡಕವೆಂಬ ವಿಶಿಷ್ಟ ಪ್ರಕಾರಕ್ಕೆ ಸೇರಿದ ಸ್ತೋತ್ರ ಕಾವ್ಯಗಳು. ವೃತ್ತ ಗಂಧಿಯಾಗಿರುವ ವೃತ್ತದ ಬಂಧವಿಲ್ಲದ ಪದ್ಯರೂಪದ ಗದ್ಯ ರಚನೆಯು

ದಂಡಕ. ಇದು ಸಂಸ್ಕೃತದಲ್ಲಿ ಮಾತ್ರ ಕಾಣಬರುವಂಥದು. ಇದರಲ್ಲಿ ಶಬ್ದ ಮಾಧುರ್ಯವು ಹೆಚ್ಚಾಗಿರುತ್ತದೆ. ಅರ್ಥ ಗಾಂಭೀರ್ಯವೂ ಇರುವುದು ಮೇಲಣ ಎರಡು ದಂಡಕಗಳ ಹೆಚ್ಚುಗಾರಿಕೆ. ಇವನ್ನು ನಾವಾಗಿಯೇ ಓದಿಕೊಂಡರೂ ಒಂದು ವಿಶಿಷ್ಟ ಅನುಭವವುಂಟಾಗುತ್ತದೆ.

ಈ ಗ್ರಂಥವನ್ನು ಬರೆಯಲು ಅವಕಾಶ ಕಲ್ಪಿಸಿ, ಪ್ರಕಟಣೆಯ ಜವಾಬ್ದಾರಿಯನ್ನು ಹೊತ್ತ ಅದ್ವೈತ ವಿದ್ಯಾ ಪ್ರತಿಷ್ಠಾನಕ್ಕೆ ಮತ್ತು ಮುಖ್ಯವಾಗಿ ಅದರ ಪ್ರಧಾನ ಪೋಷಕರೂ ಹೆಬ್ಬೂರಿನ ಶ್ರೀ ಕೋದಂಡಾಶ್ರಮದ ಪೀಠಾಧಿಪತಿಗಳೂ ಆದ ಪರಮಪೂಜ್ಯ ಶ್ರೀ ಶ್ರೀ ನಾರಾಯಣಾಶ್ರಮ ಸ್ವಾಮಿಗಳಿಗೂ ನನ್ನ ಪ್ರಣಾಮಗಳು. ಕೆಲವೇ ದಿನಗಳಲ್ಲಿ ಬಹು ಅಚ್ಚುಕಟ್ಟಾಗಿ ಮುದ್ರಿಸಿಕೊಟ್ಟ ಪರಿಮಳ ಮುದ್ರಣಾಲಯದವರಿಗೂ ಮತ್ತು ಕರಡಚ್ಚು ತಿದ್ದಿ ನನ್ನ ಶ್ರಮವನ್ನು ಕಡಮೆ ಮಾಡಿದ ಪ್ರತಿಷ್ಠಾನದ ಕಾರ್ಯದರ್ಶಿ ಡಾ|| ಬಿ. ಎಸ್. ರಾಮಕೃಷ್ಣರಾವ್ ಅವರಿಗೂ ನನ್ನ ವಂದನೆಗಳು.

ಬೆಂಗಳೂರು
10.11.1999

ಎನ್. ರಂಗನಾಥ ಶರ್ಮಾ

ವಿಷಯಾನುಕ್ರಮಣಿಕೆ

ಸ್ತೋತ್ರ ಸಂಖ್ಯೆ		ಪುಟ ಸಂಖ್ಯೆ
1.	ಶ್ರೀ ದೇವೀಸ್ತೋತ್ರಮ್	10
2.	ಶ್ರೀ ಶ್ಯಾಮಲಾದಂಡಕಮ್	12
3.	ಶ್ರೀ ಶ್ಯಾಮಲಾನವರತ್ನಮಾಲಿಕಾ	22
4.	ಶ್ರೀ ಶಾರದಾದಂಡಕಮ್	28
5.	ಶ್ರೀ ದೇವ್ಯಪರಾಧ ಕ್ಷಮಾಪಣ ಸ್ತೋತ್ರಮ್	40
6.	ಶ್ರೀ ಕಮಲಜ ದಯಿತಾಷ್ಟಕಮ್	46
7.	ಶ್ರೀ ಕಾಮಾಕ್ಷೀ ಸ್ತೋತ್ರಮ್	52

ಶ್ರೀ ದೇವೀ ಸ್ತೋತ್ರ ಮಾಲಾ

೧. ಶ್ರೀ ದೇವೀ ಸ್ತೋತ್ರಮ್

ಯಾ ದೇವೀ ಸರ್ವಭೂತೇಷು ವಿಷ್ಣುಮಾಯೇತಿ ಶಬ್ದಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ ೧ ॥

ಯಾ ದೇವೀ ಸರ್ವಭೂತೇಷು ಬುದ್ಧಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ ೨ ॥

ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ ೩ ॥

ಯಾ ದೇವೀ ಸರ್ವಭೂತೇಷು ಶಾಂತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ ೪ ॥

ಯಾ ದೇವೀ ಸರ್ವಭೂತೇಷು ಶ್ರದ್ಧಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ ೫ ॥

ಯಾ ದೇವೀ ಸರ್ವಭೂತೇಷು ಕಾಂತಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ ೬ ॥

ಯಾ ದೇವೀ ಸರ್ವಭೂತೇಷು ಲಕ್ಷ್ಮೀರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ ೭ ॥

ಯಾ ದೇವೀ ಸರ್ವಭೂತೇಷು ದಯಾರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ ೮ ॥

ಯಾ ದೇವೀ ಸರ್ವಭೂತೇಷು ತುಷ್ಟಿರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ ೯ ॥

ಯಾ ದೇವೀ ಸರ್ವಭೂತೇಷು ಮಾತೃರೂಪೇಣ ಸಂಸ್ಥಿತಾ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ ೧೦ ॥

ಚಿತಿರೂಪೇಣ ಯಾ ಕೃತ್ಸ್ನಮ್ ಏತದ್ ವ್ಯಾಪ್ಯ ಸ್ಥಿತಾ ಜಗತ್ ।
ನಮಸ್ತಸ್ಯೈ ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ ॥ ೧೧ ॥

೨. ಶ್ರೀ ಶ್ಯಾಮಲಾದಂಡಕಮ್

ಧ್ಯಾನಮ್

ಮಾಣಿಕ್ಯವೀಣಾಮ್ ಉಪಲಾಲಯಂತೀಂ
ಮದಾಲಸಾಂ ಮಂಜುಲವಾಗ್ವಿಲಾಸಾಮ್ ।
ಮಾಹೇಂದ್ರ ನೀಲದ್ಯುತಿ ಕೋಮಲಾಂಗೀಂ
ಮಾತಂಗ ಕನ್ಯಾಂ ಮನಸಾ ಸ್ಮರಾಮಿ ॥ ೧ ॥

ಚತುರ್ಭುಜೇ ಚಂದ್ರಕಲಾವತಂಸೇ
ಕುಚೋನ್ನತೇ ಕುಂಕುಮರಾಗಶೋಣೇ ।
ಪುಂಡ್ರೇಕ್ಷು ಪಾಶಾಂಕುಶ ಪುಷ್ಪ ಬಾಣ-
ಹಸ್ತೇ ನಮಸ್ತೇ ಜಗದೇಕ ಮಾತಃ ॥ ೨ ॥

ಪ್ರಾರ್ಥನಾ

ಮಾತಾ ಮರಕತಶ್ಯಾಮಾ ಮಾತಂಗೀ ಮದಶಾಲಿನೀ ।
ಕುರ್ಯಾತ್ ಕಟಾಕ್ಷಂ ಕಲ್ಯಾಣೀ ಕದಂಬವನ ವಾಸಿನೀ ॥ ೩ ॥

ಜಯ ಮಾತಂಗತನಯೇ ಜಯ ನೀಲೋತ್ಪಲದ್ಯುತೇ ।
ಜಯ ಸಂಗೀತ ರಸಿಕೇ ಜಯ ಲೀಲಾಶುಕ ಪ್ರಿಯೇ ॥ ೪ ॥

ದಂಡಕಮ್

ಜಯ ಜನನಿ! ಸುಧಾ-ಸಮುದ್ರಾಂತ-ಹೃದ್ಯನ್ ಮಣಿದ್ವೀಪ-ಸಂರೂಢ-ಬಿಲ್ವಾಟವೀ-ಮಧ್ಯ-ಕಲ್ಪದ್ರುಮಾಕಲ್ಪ-ಕಾದಂಬ-ಕಾಂತಾರ-ವಾಸಪ್ರಿಯೇ, ಕೃತ್ತಿವಾಸಃ ಪ್ರಿಯೇ, ಸರ್ವ-ಲೋಕ-ಪ್ರಿಯೇ;

ಮಹಾಕವಿ ಶ್ರೀ ಕಾಳಿದಾಸ ಕೃತಂ

ಶ್ಯಾಮಲಾದಂಡಕಮ್

ಮಾಣಿಕ್ಯಮಣಿಮಯದ ವೀಣೆಯನ್ನು ನುಡಿಸುವ, ಯೌವನದ ಮದದಿಂದ ಬೀಗುತ್ತಿರುವ, ಇಂಪಾದ ನುಡಿಗಳ ವಿಲಾಸದಿಂದ ರಂಜಿಸುವ, ಇಂದ್ರನೀಲದ ಕಪ್ಪು, ನೈದಿಲೆಯ ಕೋಮಲತೆ ಬೆರೆಸಿರುವ ಸುಂದರಾಂಗಿ, ಮಾತಂಗ ಮುನಿಕನ್ಯೆಯನ್ನು ಮನದಲ್ಲಿ ನೆನೆಯುವೆನು. ॥ ೧ ॥

ಮಾತಂಗಮುನಿತನಯೇ ವಿಜಯವಾಗಲಿ ನಿನಗೆ, ಕಪ್ಪು ನೈದಿಲೆ-ಯಂತೆ ಶೋಭಿಪಳೆ, ಜಯವಾಗಲೌ ನಿನಗೆ । ಸಂಗೀತರಸಿಕಳೇ ವಿಜಯವಾಗಲಿ ನಿನಗೆ, ಲೀಲಾರ್ಥವಾಗಿ ನೀ ಹಿಡಿದಿರುವ ಗಿಳಿಯಲ್ಲಿ ಪ್ರೀತಿಯಂ ತೋರಿಪಳೆ ಜಯವಾಗಲಿ ॥ ೪ ॥

ಜಯವಾಗಲೌ ತಾಯೆ, ಹಾಲಿನ ಸಮುದ್ರದಲ್ಲಿ ರಾಜಿಸುವ ಮಣಿದ್ವೀಪ, ಅದರಲ್ಲಿ ಬೆಳೆದಿರುವ ಬಿಲ್ವ ವನದಲ್ಲಿ, ಕಲ್ಪವೃಕ್ಷಗಳಂತೆ ಕಾದಂಬ (ಈಚಲು) ವೃಕ್ಷಗಳ ವನವು ಉಂಟು, ಅದರೊಳಗೆ ವಾಸಮಾಡಲು ನಿನಗೆ ಉಲ್ಲಾಸ, ಶಿವನ ಕಾಂತೆ, ಸರ್ವಲೋಕಕ್ಕೆ ನೀ ಪ್ರೀತಿಪಾತ್ರೆ ।

ಆದರದೊಳು ಆರಂಭಿಸಿದ ಗಾನದಲ್ಲಿ ಮೈಮರೆತು ನೀ ಅಲ್ಲಾಡೆ, ಮುಡಿದ ಕಾದಂಬಹೂಮಾಲೆಯಿಹ ಮುಡಿಯಗ್ರಭಾಗವು ನಿನ್ನ ಬೆನ್ನ-ಕೆಳಗೆ ಚೆಲುವಾದುದೌ ಓ ಹಿಮಾಚಲ ಪುತ್ರಿ, ತಲೆಯಲ್ಲಿ ಧರಿಸಿರುವ ಚಂದ್ರಲೇಖೆಯ ಕಿರಣಜಾಲದಲಿ ಮಿಶ್ರವಹ ಕಪ್ಪುತಲೆಗೂದಲಿನ ಸಿಂಗಾರ ದಿಂದೊಪ್ಪುವೆ, ಲೋಕಸಂಪೂಜಿತಳೆ! ಮನ್ಮಥನ ಬಿಲ್ಲಿನಂತಿರುವ ನಿನ್ನಯ ಹುಬ್ಬು ಬಳ್ಳಿಯಂತೆಸೆಯುವುದು, ಕಣ್ಣುಗಳು ಆ ಬಳ್ಳಿಯಲ್ಲಿ ಅರಳಿರುವ ಹೂವೆಂದೆನಗೆ ಸಂದೇಹ ಬಂದಪುದು, ಮಾತೆಂಬ ಅಮೃತವಂ ಸುರಿಯಿಸುವೆ! ಚೆಲ್ವಾದ ಗೋರೋಚನದ ಗಂಧವನ್ನು ಹಣೆಯಲ್ಲಿ ಧರಿಸುತ್ತ ನೀ ಚೆಲುವೆಯಾದೆ, ಸುಂದರಾಂಗನೆ, ರಮಾದೇವಿ ನೀನೆ । ಹೊಳೆವ ಕಿರುಮುತ್ತುಗಳ ರಾಶಿಯಿಂ ಹೊರಹೊರಟ ಬೆಳದಿಂಗಳಂತೆ ಲಾವಣ್ಯದಿಂ ಬೆಳಗುತಿಹ ನಿನ್ನ ಕೆನ್ನೆಯಲಿಟ್ಟ ಕಸ್ತೂರಿ ರೇಖೆಯ ಸುಗಂಧಕ್ಕೆ

ಸಾದರಾರಬ್ಧ-ಸಂಗೀತ-ಸಂಭಾವನಾ-ಸಂಭ್ರಮಾಲೋಲ-ನೀಪಸ್ರಗಾಬದ್ಧ-ಚೂಲೀ ಸನಾಥ ತ್ರಿಕೇ, ಸಾನುಮತ್ ಪುತ್ರಿಕೇ;

ಶೇಖರೀಭೂತ-ಶೀತಾಂಶು-ರೇಖಾ-ಮಯೂಖಾವಲೀ-ಬದ್ಧ-ಸುಸ್ನಿಗ್ಧ-ನೀಲಾಲಕ-ಶ್ರೇಣಿ-ಶೃಂಗಾರಿತೇ, ಲೋಕ-ಸಂಭಾವಿತೇ;

ಕಾಮ-ಲೀಲಾ-ಧನುಃ-ಸನ್ನಿಭ-ಭ್ರೂಲತಾ-ಪುಷ್ಪ-ಸಂದೋಹ-ಸಂದೇಹ ಕೃಲ್ಲೋಚನೇ,ಚಾರು-ಗೋರೋಚನಾ-ಪಂಕ-ಕೇಲೀ-ಲಲಾಮಾಭಿ-ರಾಮೇ, ಸುರಾಮೇ, ರಮೇ;

ಪ್ರೋಲ್ಲಸದ್-ಬಾಲಿಕಾ-ಮೌಕ್ತಿಕ-ಶ್ರೇಣಿಕಾ-ಚಂದ್ರಿಕಾ-ಮಂಡಲೋದ್ಭಾಸಿ-ಲಾವಣ್ಯ-ಗಂಡಸ್ಥಲ-ನ್ಯಸ್ತ-ಕಸ್ತೂರಿಕಾ-ಪತ್ರರೇಖಾ-ಸಮುದ್ಭೂತ-ಸೌರಭ್ಯ-ಸಂಭ್ರಾಂತ-ಭೃಂಗಾಂಗನಾಗೀತ-ಸಾಂದ್ರೀಭವನ್-ಮಂದ್ರ-ತಂತ್ರೀಸ್ವರೇ, ಸುಸ್ವರೇ, ಭಾಸ್ವರೇ;

ವಲ್ಲಕೀ-ವಾದನ-ಪ್ರಕ್ರಿಯಾ-ಲೋಲ-ತಾಲೀದಲಾಬದ್ಧ-ತಾಟಂಕ-ಭೂಷಾ-ವಿಶೇಷಾನ್ವಿತೇ, ಸಿದ್ಧ ಸಮ್ಮಾನಿತೇ, ದಿವ್ಯಹಾಲಾ ಮದೋದ್ವೇಲ ಹೇಲಾ-ಲಸಚ್ಚಕ್ಷು ರಾಂದೋಲನ ಶ್ರೀಸಮಾಕ್ಷಿಪ್ತ-ಕರ್ಣೈಕ-ನೀಲೋತ್ಪಲೇ, ಶ್ಯಾಮಲೇ, ಪೂರಿತಾಶೇಷ-ಲೋಕಾಭಿವಾಂಛಾ-ಫಲೇ, ನಿರ್ಮಲೇ, ಶ್ರೀಫಲೇ;

ಸ್ವೇದ-ಬಿಂದೂಲ್ಲಸತ್-ಫಾಲ-ಲಾವಣ್ಯ-ನಿಃಷ್ಯಂದ-ಸಂದೋಹ-ಸಂದೇಹಕೃನ್-ನಾಸಿಕಾ-ಮೌಕ್ತಿಕೇ, ಸರ್ವಮಂತ್ರಾತ್ಮಿಕೇ, ಕಾಲಿಕೇ;

ಮುಗ್ಧ-ಮಂದಸ್ಮಿತೋದಾರ-ವಕ್ತ್ರ-ಸ್ಫುರತ್-ಪೂಗ-ತಾಂಬೂಲ-ಕರ್ಪೂರ-ಖಂಡೋತ್ಕರೇ, ಜ್ಞಾನಮುದ್ರಾಕರೇ, ಸರ್ವ-ಸಂಪತ್ಕರೇ, ಪದ್ಮಭಾಸ್ವತ್ಕರೇ, ಶ್ರೀಕರೇ;

ಕುಂದ-ಪುಷ್ಪ-ದ್ಯುತಿ-ಸ್ನಿಗ್ಧ-ದಂತಾವಲೀ-ನಿರ್ಮಲಾಲೋಲ-ಕಲ್ಲೋಲ-ಸಮ್ಮೇಲನ-ಸ್ಮೇರ ಶೋಣಾಧರೇ, ಚಾರುವೀಣಾ-ಧರೇ, ಪಕ್ವ-ಬಿಂಬಾಧರೇ! ॥ ೧ ॥

ಮರುಳಾಗಿ ಬಂದ ಹೆಣ್ದುಂಬಿಗಳ ನಾದದಿಂ ಹೆಚ್ಚುವುದು ನಿನ್ನ ವೀಣಾತಂತಿಯಿಂದ ಬಹು ಮೃದುನಾದ, ಇಂಪಾದ ಸ್ವರದವಳೆ, ಬೆಳಗುವವಳೆ ।

ವೀಣೆಯನು ನುಡಿಯಿಸುವ ಸಂಭ್ರಮದಿಂದ ಕಿವಿಯೋಲೆ-ಯಲ್ಲಾಡುತಿಹುದು ಹೇ ದೇವಿ ಹೇ ಸಿದ್ಧಿ ಪೂಜ್ಯೆ । ದಿವ್ಯವಾಗಿರ್ಪ ಸುರೆಯನ್ನು ನೀ ಕುಡಿಯೆ ಮದದಿಂದ ವೈಭವದಿಂದ ತಿರುಗುತಿಹ ಕಣ್ಣುಗಳ ಸೌಂದರ್ಯ, ನಿನ್ನ ಕಿವಿಯಲ್ಲಿ ಮುಡಿದಿರ್ಪ ಕನ್ನೈದಿಲೆಯ ಸೌಂದರ್ಯವಂ ಸೆಳೆವುದು, ಎಲ್ಲ ಜನಗಳ ಮನಸ್ಸಿನಲ್ಲಿರ್ಪ ಇಷ್ಟವನು ನಿಲ್ಲದೇ ಕೊಡುವೆ ನೀ ದೇವಿ, ಸಂಪತ್ಕರೇ!

ಬೆವರು ಹನಿಯಿಂದ ಸುಂದರವಾದ ಹಣೆಯ ಲಾವಣ್ಯವೇ ಹರಿದಿರ್ಪುದೋ ಎಂದು ಸಂದೇಹವನ್ನುಂಟು ಮಾಡುತಿದೆ, ಮೂಗಿನಲಿ ಧರಿಸಿರುವ ಮೂಗುತಿಯ ಮೌಕ್ತಿಕವು, ವಿಶ್ವರೂಪಿಣಿ, ಕಾಳಿಕಾದೇವಿ ಮಾತೇ। ಮಧುರವಹ ಮುಗುಳು ನಗೆಯಿಂದ ಸುಂದರವಾದ ಬಾಯಲ್ಲಿ ಹೊಳೆಯುತಿದೆ ಅಡಿಕೆ ಎಲೆ ಪಚ್ಚಕರ್ಪುರದ ಪೆಂಪು, ಜ್ಞಾನಮುದ್ರೆಯ ಕರದಿ ಧರಿಸಿರ್ಪಳೇ, ಸರ್ವಸಂಪತ್ಕರೇ, ತಾವರೆಯ ಹೂಹಿಡಿದು ಸೊಗಯಿಸುವ ಕೈಯ ದೇವಿ,

ಮಲ್ಲಿಗೆಯ ಹೂವಂತೆ ರಂಜಿಸುವ ಹಲ್ಲುಗಳ ಸಾಲಿನ ಸ್ವಚ್ಛ ಬೆಳಕಿನ ಮೇಳದಿಂದ ಸುಂದರವಾದ ಮುಗುಳುನಗೆಯನ್ನು ಬೀರ್ಪ ಕೆಂಪಾದ ಕೆಳದುಟಿಯು ಕಾಳಿ ನಿನಗೆ, ಸೊಬಗುಳ್ಳ ವೀಣೆಯನು ಧರಿಸಿರುವಳೆ, ಮಾಗಿರುವ ತೊಂಡೆಹಣ್ಣನು ಹೋಲ್ವ ಅಧರದವಳೆ ।

ಮಧುರನವತಾರುಣ್ಯವೆಂಬ ಚಂದ್ರನ ಉದಯದಲಿ ಮೇರೆದಪ್ಪಿ ಉಕ್ಕುತಲಿರುವ ಲಾವಣ್ಯವೆನುವ ಹಾಲಿನ ಕಡಲಿನಲ್ಲಿ ಹುಟ್ಟುತ್ತಿರುವ ಶಂಖದಂತಿದೆ ನಿನ್ನ ಕೊರಳು ಕಾಳಿ । ಕುಶಲಕಲೆಗಳ ಬೀಡು ನೀನು ದೇವಿ, ಹೇ ಮಂದಗಮನೇ ।

ಸುಲಲಿತ-ನವ-ಯೌವನಾರಂಭ-ಚಂದ್ರೋದಯೋದ್‌ವೇಲ-ಲಾವಣ್ಯ ದುಗ್ಧಾರ್ಣವಾವಿರ್ ಭವತ್ ಕಂಬು-ಬಿಬ್ಬೋಕ ಭೃತ್ ಕಂಧರೇ, ಸತ್ಕಲಾ-ಮಂದಿರೇ, ಮಂಥರೇ;

ದಿವ್ಯ-ರತ್ನ-ಪ್ರಭಾ-ಬಂಧುರ-ಚ್ಛನ್ನ-ಹಾರಾದಿ ಭೂಷಾ-ಸಮುದ್ಯೋತ-ಮಾನಾ ನವದ್ಯಾಂಗ-ಶೋಭೇ, ಶುಭೇ;

ರತ್ನ-ಕೇಯೂರ-ರಶ್ಮಿ ಚ್ಛಟಾ-ಪಲ್ಲವ ಪ್ರೋಲ್ಲಸದ್ ದೋರ್ಲತಾ-ರಾಜಿತೇ, ಯೋಗಿಭಿಃ ಪೂಜಿತೇ, ವಿಶ್ವ-ದಿಙ್ಮಂಡಲ-ವ್ಯಾಪಿ-ಮಾಣಿಕ್ಯ-ತೇಜಃ ಸ್ಫುರತ್-ಕಂಕಣಾಲಂಕೃತೇ, ವಿಭ್ರಮಾಲಂಕೃತೇ, ಸಾಧುಭಿಃ ಸತ್ಕೃತೇ;

ವಾಸರಾರಂಭ-ವೇಲಾ-ಸಮುಜ್ಜೃಂಭಮಾಣಾರವಿಂದ-ಪ್ರತಿದ್ವಂದ್ವಿ-ಪಾಣಿದ್ವಯೇ, ಸಂತತೋದ್ಯದ್ದಯೇ, ಅದ್ವಯೇ;

ದಿವ್ಯ-ರತ್ನೋರ್ಮಿಕಾ-ದೀಧಿತಿ-ಸ್ತೋಮ-ಸಂಧ್ಯಾಯಮಾನಾಂಗುಲೀ-ಪಲ್ಲವೋದ್ಯನ್-ನಖೇಂದು-ಪ್ರಭಾ-ಮಂಡಲೇ, ಸನ್ನತಾಖಂಡಲೇ, ಚಿತ್‌ಪ್ರಭಾ-ಮಂಡಲೇ, ಪ್ರೋಲ್ಲಸತ್-ಕುಂಡಲೇ;

ತಾರಕಾರಾಜಿ-ನೀಕಾಶ-ಹಾರಾವಲಿ-ಸ್ಮೇರ-ಚಾರುಸ್ತನಾಭೋಗ-ಭಾರಾ ನಮನ್ ಮಧ್ಯ-ವಲ್ಲೀ ವಲಿಚ್ಛೇದ-ವೀಚೀ-ಸಮುಲ್ಲಾಸ- ಸಂದರ್ಶಿತಾಕಾರ -ಸೌಂದರ್ಯ ರತ್ನಾಕರೇ, ವಲ್ಲಕೀಭೃತ್‌ಕರೇ, ಕಿಂಕರ ಶ್ರೀಕರೇ;

ಹೇಮಕುಂಭೋಪ ಮೋತ್ತುಂಗ-ವಕ್ಷೋಜ-ಭಾರಾವನಮ್ರೇ, ತ್ರಿಲೋಕಾವ ನಮ್ರೇ, ಲಸದ್‌ವೃತ್ತ ಗಂಭೀರ-ನಾಭೀ-ಸರಸ್ತೀರ-ಶೈವಾಲ-ಶಂಕಾಕರ-ಶ್ಯಾಮ-ರೋಮಾವಲೀ- ಭೂಷಣೇ, ಮಂಜು-ಸಂಭಾಷಣೇ;

ಚಾರು-ಶಿಂಜತ್-ಕಟೀ ಸೂತ್ರ-ನಿರ್ಭರ್ತ್ಸಿತಾನಂಗ-ಲೀಲಾಧನುಃ ಶಿಂಜಿನೀ-ಡಂಬರೇ, ದಿವ್ಯ-ರತ್ನಾಂಬರೇ;

ಪದ್ಮರಾಗೋಲ್ಲಸನ್-ಮೇಖಲಾ-ಭಾಸ್ವರ-ಶ್ರೋಣಿ-ಶೋಭಾಜಿತ-ಸ್ವರ್ಣಭೂಭೃತ್ತಲೇ, ಚಂದ್ರಿಕಾ ಶೀತಲೇ ॥ ೨ ॥

ದಿವ್ಯರತ್ನಗಳು ಬಲುಚಂದವಹ ಹಾರಗಳು ಸಂದ ನಾನಾ ಬಗೆಯ ಒಡವೆಗಳು ಕಾಂತಿಯಂ ಬೀರೆ ನಿನ್ನಯ ದಿವ್ಯ ದೇಹದ ಪ್ರಭೆಯು ಮೇಲಾಗಿ ಕಣ್ಗೆಸೆಯುವುದು, ಕುಶಲದಾತೇ, ರತ್ನಮಯ ಭುಜಕೀರ್ತಿ ಎಂಬ ಒಡವೆಯ ಕಾಂತಿಯಿಂದ ನಿನ್ನಯ ಬಳ್ಳಿಯಂತಿರುವ ತೋಳು-ಗಳಿಂದ ಶೋಭಿತೆ, ಯೋಗಿಜನಪೂಜಿತೆ, ಸರ್ವದಿಕ್ಕುಗಳನ್ನು ವ್ಯಾಪಿಸುವ ಮಾಣಿಕ್ಯತೇಜಸ್ಸಿನಿಂ ಕಾಂತಿಗೊಂಡ ಕಂಕಣಗಳಿಂ ರಾಜಿತೆ; ವಿಭ್ರಮದಿ ಶೋಭಿತೆ, ಸಾಧಕರ ಸತ್ಕಾರ ಪೂಜಿತೆ । ದಿನದ ಆರಂಭದಲಿ ಅರಳಿರ್ಪ ತಾವರೆಗೆ ಸದೃಶವಹ ಪಾಣಿಯುಗದಿಂ ಶೋಭಿತೆ, ಸಂತತವು ಕರುಣಾಳು, ಅದ್ವಿತೀಯೆ ।

ದಿವ್ಯರತ್ನದ ಬೆರಳಿನುಂಗುರದ ದೀಪ್ತಿಯಿಂ ಸಂಜೆಗೆಂಪನು ತಾಳ್ದ ಚಿಗುರಿನಂದದೊಳಿರ್ಪ ಬೆರಳುಗಳ ನಖಚಂದ್ರ ಸಂಶೋಭಿತೆ, ಇಂದ್ರನಿಂ ವಂದಿತೆ, ಚಿತ್ಕಾಂತಿ ಮಂಡಿತೆ, ಹೊಳೆವ ಕುಂಡಲಯುತಳೆ, ನಕ್ಷತ್ರಗಳ ಹೋಲ್ವ ಮುತ್ತಿನ ಸರಂಗಳಿಂ ಶೋಭಿಸುವ ಸ್ತನಭಾರದಿಂದ ಬಾಗಿದ ಬಳ್ಳಿಯಂತಿರ್ಪ ನಡುವಿನೊಳ್ ಕಾಣಿಸುವ ತ್ರಿವಳಿಗಳ ಅಲೆಗಳ ಸಮುಲ್ಲಾಸದಿಂ ಪ್ರಕಟವಹ ಸೌಂದರ್ಯ ರತ್ನಾಕರೆ, ವೀಣೆಯನು ಹಿಡಿದವಳೆ, ಕಿಂಕರರಿಗೊಲಿದು, ಸಂಪತ್ತನ್ನು ನೀಡುತಿಹಳೆ, ಸ್ವರ್ಣ-ಕಲಶಂಗಳಿಗೆ ಸಮವಪ್ಪ ಕುಚಗಳ ಭಾರದಿಂ ಬಗ್ಗಿಹಳೆ, ಮೂರು-ಲೋಕಗಳಿಂದ ವಂದಿತೆ, ದುಂಡಾಗಿ ಶೋಭಿಸುವ ನಾಭೀ ಸರೋವರದ ತೀರದಲಿ ಕಾಣಿಸುವ ಪಾಚಿಯಂದದ ಕಪ್ಪು ರೋಮಾಳಿ ಭೂಷಿತೆ, ಇಂಪಾದ ನುಡಿಯವಳೆ । ಸೊಂಟದೊಳಗಿಂಪಾಗಿ ನಾದಗೈಯುವ ಡಾಬುಗೆಜ್ಜೆಗಳ ದನಿಯಿಂದ ಮನ್ಮಥನ ಬಿಲ್ಲಿನ ಧ್ವನಿಯನ್ನು ಮೀರು-ವವಳೆ, ದಿವ್ಯರತ್ನಗಳಿಂದ ಸೊಬಗನ್ನು ತಾಳಿರುವ ಸೀರೆಯನು ಧರಿಸಿದವಳೆ, ಪದ್ಮರಾಗಗಳಿಂದ ಶೋಭಿಸುವ ಕಟಿಸೂತ್ರದಿಂದ ಹೊಳೆ-ಯುವ ಶ್ರೋಣಿ ಭಾಗದಿಂದ ಸ್ವರ್ಣಮಯ ಮೇರುವಿನ ಭೂಮಿಯಂ ಜಯಿಸಿದವಳೇ, ಬೆಳದಿಂಗಳಂತೆ ಶೀತಲ ಸೌಮ್ಯಗುಣದವಳೆ ॥ ೨ ॥

ವಿಕಸಿತ-ನವ-ಕಿಂಶುಕಾ-ತಾಮ್ರ-ದಿವ್ಯಾಂಶುಕ-ಚ್ಛನ್ನ-ಚಾರೂರು ಶೋಭಾ-ಪರಾ ಭೂತ-ಸಿಂದೂರ-ಶೋಣಾಯಮಾನೇಂದ್ರ-ಮಾತಂಗ-ಹಸ್ತಾರ್ಗಲೇ, ವೈಭವಾನರ್ಗಲೇ, ಶ್ಯಾಮಲೇ;

ಕೋಮಲ-ಸ್ನಿಗ್ಧ-ನೀಲೋತ್ಪಲೋತ್ಪಾದಿತಾನಂಗ ತೂಣೀರ-ಶಂಕಾ-ಕರೋದಾರ-ಜಂಘಾಲತೇ, ಚಾರುಲೀಲಾಗತೇ;

ನಮ್ರ ದಿಕ್ಪಾಲ-ಸೀಮಂತಿನೀ-ಕುಂತಲ-ಸ್ನಿಗ್ಧ-ನೀಲ ಪ್ರಭಾಪುಂಜ-ಸಂಜಾತ-ದೂರ್ವಾಂಕುರಾಶಂಕ-ಸಾರಂಗ-ಸಂಯೋಗ-ರಿಂಖನ್ ನಖೇಂದೂಜ್ಜ್ವಲೇ, ಪ್ರೋಜ್ಜ್ವಲೇ, ನಿರ್ಮಲೇ;

ಪ್ರಹ್ವ-ದೇವೇಶ-ಲಕ್ಷ್ಮೀಶ-ಭೂತೇಶ -ತೋಯೇಶ-ವಾಣೀಶ-ಕೀನಾಶ-ದೈತ್ಯೇಶ-ಯಕ್ಷೇಶ-ವಾಯ್ವಗ್ನಿ-ಕೋಟೀರ-ಮಾಣಿಕ್ಯ-ಸಂಘೃಷ್ಟ-ಬಾಲಾ-ತಪೋದ್ದಾಮ-ಲಾಕ್ಷಾರಸಾರುಣ್ಯ-ತಾರುಣ್ಯ-ಲಕ್ಷ್ಮೀ ಗೃಹೀತಾಂಘ್ರಿ-ಪದ್ಮೇ, ಸುಪದ್ಮೇ ಉಮೇ ॥ ೩ ॥

ಸುರುಚಿರ-ನವರತ್ನ-ಪೀಠಸ್ಥಿತೇ, ಸುಸ್ಥಿತೇ; ರತ್ನ ಪದ್ಮಾಸನೇ, ರತ್ನ- ಸಿಂಹಾಸನೇ, ಶಂಖಪದ್ಮ ದ್ವಯೋಪಾಶ್ರಿತೇ, ವಿಶ್ರುತೇ, ತತ್ರ ವಿಘ್ನೇಶ- ದುರ್ಗಾವಟು-ಕ್ಷೇತ್ರ-ಪಾಲೈರ್ಯುತೇ; ಮತ್ತ-ಮಾತಂಗ-ಕನ್ಯಾ-ಸಮೂಹಾನ್ವಿತೇ, ಮಂಜುಲಾ-ಮೇನಕಾದ್ಯಂಗನಾ-ಮಾನಿತೇ, ಭೈರವೈ- ರಷ್ಟಭಿರ್ ವೇಷ್ಟಿತೇ; ದೇವಿ! ವಾಮಾದಿಭಿಃ ಶಕ್ತಿಭಿಃ ಸೇವಿತೇ; ಧಾತ್ರಿ! ಲಕ್ಷ್ಮ್ಯಾದಿ-ಶಕ್ತ್ಯಷ್ಟಕೈಃ ಸಂಯುತೇ; ಮಾತೃಕಾ ಮಂಡಲೈರ್ ಮಂಡಿತೇ; ಯಕ್ಷಗಂಧರ್ವ-ಸಿದ್ಧಾಂಗನಾ-ಮಂಡಲೈರರ್ಚಿತೇ; ಪಂಚಬಾಣಾತ್ಮಿಕೇ, ಪಂಚಬಾಣೇನ ರತ್ಯಾ ಚ ಸಂಭಾವಿತೇ; ಪ್ರೀತಿಭಾಜಾ ವಸಂತೇನ ಚಾನಂದಿತೇ;

ಭಕ್ತಿಭಾಜಾಂ ಪರಂ ಶ್ರೇಯಸೇ ಕಲ್ಪಸೇ । ಯೋಗಿನಾಂ ಮಾನಸೇ ದ್ಯೋತಸೇ । ಛಂದಾಸಾಮೋಜಸಾಂ ಭ್ರಾಜಸೇ । ಗೀತವಿದ್ಯಾವಿನೋದಾತಿ ತೃಷ್ಣೇನ ಕೃಷ್ಣೇನ ಸಂಪೂಜ್ಯಸೇ । ಭಕ್ತಿಮಚ್ಚೇತಸಾ ವೇಧಸಾ ಸ್ತೂಯಸೇ । ವಿಶ್ವಹೃದ್ಯೇನ ವಾದ್ಯೇನ ವಿದ್ಯಾಧರೈರ್ ಗೀಯಸೇ ॥ ೪ ॥

ಅರಳಿರ್ಪ ಹೊಸಮುತ್ತುಗದ ಹೂವಿನಂತೆ ಕೆಂಪಾದ ನವವಸ್ತ್ರದಿಂ ಮುಚ್ಚಿದೂರುಗಳ ಶೋಭೆಯಿಂ ಸಿಂದೂರ ಲಿಪ್ತೇಂದ್ರ ಗಜದ ಸೊಂಡಿಲ ಮೀರ್ದ ದೇವಿ ನೀಂ, ವೈಭವದೊಳಸಮಾನೆ, ಹೇ ಶ್ಯಾಮಲೇ! ಹೊಳೆವ ಕೋಮಲ ನೀಲಮಣಿ ನಿರ್ಮಿತೋದಾರ ಮೊಳಕಾಲುಗಳ ನೋಡೆ ಮನ್ಮಥನ ಬತ್ತಳಿಕೆಗಳೋ ಎಂಬ ಶಂಕೆ ತಲೆದೋರ್ಪುದೌ ಮಾತೆ, ಮಂದಸುಂದರಗಮನೇ! ವಂದಿಸುವ ದಿಕ್ಪಾಲ ಪತ್ನಿಯರ ಸುಸ್ನಿಗ್ಧ ಮುಂಗುರುಳ ಕಾಂತಿಯಿಂ ದೂರ್ವೆಗಳೋ ಎಂಬಂತೆ ಕಾಣಲ್ಕೆ ನಖಕಾಂತಿ, ದೂರ್ವೆಗಳ ಭ್ರಮೆಯಿಂದಲೈತರಲ್ ಹರಿಣಗಳು, ನಖಕಾಂತಿಸಂರಾಜಿತೆ, ಉಜ್ಜ್ವಲೇ, ನಿರ್ಮಲೇ । ನತರಾದ ದೇವೇಂದ್ರ ಲಕ್ಷ್ಮೀಶ ಪರಮೇಶ ತೋಯೇಶ ವಾಣೀಶ ಯಮರಾಜ ದೈತ್ಯೇಶ ಯಕ್ಷೇಶ ವಾಯ್ವಗ್ನಿಗಳ ಕಿರೀಟಗಳ ಮಾಣಿಕ್ಯಗಳ್ ನಿನ್ನ ಪದಪದ್ಮಗಳ ಘರ್ಷಿಸಲ್ ಕೆಂಪಾಗಿ ಎಳೆಬಿಸಿಲಿನಂತೆ ಲಾಕ್ಷೆಯ ರಸವೋ ಎಂಬಂತೆ ತಾರುಣ್ಯ ಲಕ್ಷ್ಮಿಯಾ ಸೊಬಗಿನಿಂ ರಂಜಿಸುವ ಪದಗಳಿಂ ಶೋಭಿತೆ, ಸುಪದ್ಮೇ ಉಮೇ ॥ ೩ ॥

ಸಂಶೋಭಿ ನವರತ್ನ ಪೀಠಸ್ಥಿತೇ ಸುಸ್ಥಿತೇ ರತ್ನಪದ್ಮಾಸನದಿ, ವಿಘ್ನೇಶ ದುರ್ಗಾ ರತ್ನಸಿಂಹಾಸನದಿ, ಶಂಖಪದ್ಮಗಳೆಂಬ ನಿಧಿಗಳಿಂ ಸೇವಿತೇ । ವಟುಕ್ಷೇತ್ರಪಾಲರಿಂ ಶೋಭಿಪೆ, ಮದಿಸಿರ್ಪಮಾತಂಗ ಕನ್ಯೆಯರ ಸಂಘದಿಂ ಸೇವಿತೇ, ಮಂಜುಲಾ ಮೇನಕಾದ್ಯಪ್ಸರಸರಿಂ ಮಾನಿತೇ, ಎಂಟು ಭೈರವರಿಂದ ಸಂಯುತೇ, ದೇವಿ, ವಾಮಾದಿ ಶಕ್ತಿಗಳಿಂದ ಸೇವಿತೇ, ಮಾತೃಕಾಗಣಗಳಿಂ ಭೂಷಿತೇ, ಯಕ್ಷಗಂಧರ್ವ ಸಿದ್ಧಾಂಗನಾಸಂಘದಿಂ ಪೂಜಿತೇ, ಮನ್ಮಥ ಸ್ವರೂಪಿಣಿಯೆ, ಮದನನಿಂ ರತಿಯಿಂದೆ ಮಾನಿತೇ, ಪ್ರೀತಿಪಾತ್ರನಹ ವಸಂತನಿಂ ತೋಷಿತೇ, ಭಕ್ತರ ಶ್ರೇಯಸ್ಸು ನಿನ್ನಿಂದ ಆದಪುದು, ಯೋಗಿಗಳ ಮಾನಸದಿ ದ್ಯೋತಿಪಳೆ । ವೇದಗಳ ತೇಜದಿಂ ರಾಜಿಪೆ । ಬ್ರಹ್ಮನಿಂ ಭಕ್ತಿಪೂರ್ವಕವಾಗಿ ಸಂಸ್ತುತೇ, ವಿಶ್ವ-ಸಂತೋಷಕರವಾದ್ಯಮಂ ನುಡಿಸುತ್ತ ವಿದ್ಯಾಧರರ್ ನಿನ್ನ ಸ್ತುತಿಪರೌ ಮಾತೇ ॥

ಶ್ರುತಿಮನೋಹರವಾದ ಧ್ವನಿಯನ್ನು ಬೀರುತಿಹ ವೀಣೆಯಂ ನುಡಿಸುತ್ತಾ ಕಿನ್ನರರ್ ಸ್ತುತಿಸುವರು ದೇವಿ, ಯಕ್ಷಗಂಧರ್ವ ಸಿದ್ಧಾಂಗನಾ

ಶ್ರವಣ-ಹರಣ-ದಕ್ಷಿಣ-ಕ್ವಾಣಯಾ ವೀಣಯಾ ಕಿನ್ನರೈರ್ಗೀಯಸೇ । ಯಕ್ಷ -ಗಂಧರ್ವ-ಸಿದ್ಧಾಂಗನಾ-ಮಂಡಲೈರ್ ಅರ್ಚ್ಯಸೇ । ಸರ್ವಸೌಭಾಗ್ಯ ವಾಂಛಾವತೀಭಿರ್ ವಧೂಭಿಃ ಸುರಾಣಾಂ ಸಮಾರಾಧ್ಯಸೇ ।

ಸರ್ವವಿದ್ಯಾ-ವಿಶೇಷಾತ್ಮಕಂ ಚಾಟುಗಾಥಾ ಸಮುಚ್ಚಾರಣಂ ಕಂಠ-ಮೂಲೋಲ್ಲಸತ್ ವರ್ಣರಾಜಿತ್ರಯಂ ಕೋಮಲ ಶ್ಯಾಮಲೋದಾರ ಪಕ್ಷದ್ವಯಂ ತುಂಡಶೋಭಾತಿ ದೂರೀಭವತ್ ಕಿಂಶುಕಂ ತಂ ಶುಕಂ ಲಾಲಯಂತೀ ಪರಿಕ್ರೀಡಸೇ ॥ ೫ ॥

ಪಾಣಿಪದ್ಮ ದ್ವಯೇನಾಕ್ಷ ಮಾಲಾಮಪಿ ಸ್ಫಾಟಿಕೀಂ ಜ್ಞಾನಸಾರಾತ್ಮಕಂ ಪುಸ್ತಕಂ ಚಾಪರೇಣಾಂಕುಶಂ ಪಾಶಮಾಬಿಭ್ರತೀ ಯೇನ ಸಂಚಿಂತ್ಯಸೇ ಚೇತಸಾ ತಸ್ಯ ವಕ್ತ್ರಾಂತರಾತ್ ಗದ್ಯಪದ್ಯಾತ್ಮಿಕಾ ಭಾರತೀ ನಿಸ್ಸರೇತ್ ।

ಯೇನ ವಾ ಯಾವಕಾಭಾಕೃತಿರ್ಭಾವ್ಯಸೇ ತಸ್ಯ ವಶ್ಯಾ ಭವಂತಿ ಸ್ತ್ರಿಯಃ ಪೂರುಷಾಃ । ಯೇನ ವಾ ಶಾತಕುಂಭ-ದ್ಯುತಿರ್ಭಾವ್ಯಸೇ ಸೋಽಪಿ ಲಕ್ಷ್ಮೀ ಸಹಸ್ರೈಃ ಪರಿಕ್ರೀಡತೇ । ಕಿಂ ನ ಸಿಧ್ಯೇದ್ ವಪುಃ ಶ್ಯಾಮಲಂ ಕೋಮಲಂ ಚಂದ್ರಚೂಡಾನ್ವಿತಂ ತಾವಕಂ ಧ್ಯಾಯತಃ ।

ತಸ್ಯ ಲೀಲಾಸರೋ ವಾರಿಧಿಃ, ತಸ್ಯ ಕೇಲೀವನಂ ನಂದನಂ, ತಸ್ಯ ಭದ್ರಾಸನಂ ಭೂತಲಂ, ತಸ್ಯ ಗೀರ್ದೇವತಾ ಕಿಂಕರೀ, ತಸ್ಯ ಚಾಜ್ಞಾಕರೀ ಶ್ರೀಃ ಸ್ವಯಮ್ ॥೬॥

ಸರ್ವ ತೀರ್ಥಾತ್ಮಿಕೇ । ಸರ್ವ ಮಂತ್ರಾತ್ಮಿಕೇ । ಸರ್ವ ತಂತ್ರಾತ್ಮಿಕೇ । ಸರ್ವಯಂತ್ರಾತ್ಮಿಕೇ । ಸರ್ವ ಶಕ್ತ್ಯಾತ್ಮಿಕೇ । ಸರ್ವ ಪೀಠಾತ್ಮಿಕೇ । ಸರ್ವತತ್ತ್ವಾತ್ಮಿಕೇ । ಸರ್ವ ವಿದ್ಯಾತ್ಮಿಕೇ । ಸರ್ವಯೋಗಾತ್ಮಿಕೇ । ಸರ್ವನಾದಾತ್ಮಿಕೇ । ಸರ್ವವರ್ಣಾತ್ಮಿಕೇ । ಸರ್ವಶಬ್ದಾತ್ಮಿಕೇ । ಸರ್ವ ವಿಶ್ವಾತ್ಮಿಕೇ । ಸರ್ವದೀಕ್ಷಾತ್ಮಿಕೇ । ಸರ್ವಸರ್ವಾತ್ಮಿಕೇ । ಸರ್ವಗೇ । ಹೇ ಜಗನ್ಮಾತೃಕೇ । ಪಾಹಿ ಮಾಂ, ಪಾಹಿ ಮಾಂ ಪಾಹಿ ಮಾಂ ದೇವಿ ! ತುಭ್ಯಂ ನಮೋ, ದೇವಿ ! ತುಭ್ಯಂ ನಮೋ, ದೇವಿ ! ತುಭ್ಯಂ ನಮಃ ॥ ೭ ॥

ಇತಿಶ್ರೀ ಮಹಾಕವಿ ಕಾಲಿದಾಸ ಪ್ರಣೀತಂ ಶ್ಯಾಮಲಾದಂಡಕಂ ಸಂಪೂರ್ಣಮ್ ॥

ಮಂಡಲದಿನರ್ಚಿತೇ, ಸರ್ವಸೌಭಾಗ್ಯಗಳ ಬಯಸುತಿಹ ದೇವಾಂಗನೆ-ಯರಿಂದ ಪೂಜಿತೇ, ಸರ್ವವಿದ್ಯಾಸ್ವರೂಪದ ಗಿಳಿಯ ಲಾಲಿಸುತ ಕ್ರೀಡಿಸುವೆ ಹೇ ದೇವಿ, ಆ ಶುಕವು ಹೃದ್ಯವಹ ಪದ್ಯಗಳ ಹೇಳುವುದು, ಅದರ ಕಂಠದ ಬುಡದಿ ಮೂರುಪಟ್ಟಿಗಳಿಹವು, ಕೋಮಲಶ್ಯಾಮಲೋ-ದಾರವಹ ರೆಕ್ಕೆಗಳ್, ಕೊಕ್ಕಿನೊಳಿರ್ಪ ವರ್ಣವು ಮುತ್ತುಗದ ಹೂವ ಶೋಭೆಯಂ ಮೀರಿಹುದು, ಅಂತಹ ಮನೋಜ್ಞ ಗಿಳಿಯಂ ಹಿಡಿದು ಕ್ರೀಡಿಸುವೆ ದೇವಿ ॥ ೫ ॥

ಪಾಣಿಪದ್ಮದ್ವಯದೊಳೊಂದರೊಳ್ ಸ್ಫಟಿಕದಿಂ ನಿರ್ಮಿಸಿದ ಜಪಮಾಲೆಯಿನ್ನೊಂದರೊಳ್ ಜ್ಞಾನಸಾರವಹ ಪುಸ್ತಕಂ, ಮೂರನೆಯ ಕರದಲ್ಲಿ ಅಂಕುಶಂ, ನಾಲ್ಕನೆಯ ಕರದಲ್ಲಿ ಪಾಶವೀ ಪರಿಯೊಳಾರ್ ನಿನ್ನನ್ನು ಧ್ಯಾನಿಪರೋ ಅವರ ಬಾಯಿಂ ಗದ್ಯಪದ್ಯಗಳ ಭಾರತಿಯೆ ಹೊರಡುವುದು ಮಾತೆ, ಅರಗಿನ ಸುವರ್ಣದಿಂ ರಾಜಿಸುವ ನಿನ್ನನ್ನು ಧ್ಯಾನಿಸುವ ಪುರುಷಂಗೆ ವನಿತೆಯರು ಪುರುಷರೂ ವಶ್ಯರಹರು । ಕನಕವರ್ಣದ ನಿನ್ನ ರೂಪಮಂ ಧ್ಯಾನಿಪನು ಸಾವಿರದ ಸಂಖ್ಯೆಯಿಹ ಲಕ್ಷ್ಮಿಯರ ಸಂಗದಿ ಕ್ರೀಡಿಸುವನು । ಶ್ಯಾಮಲವು ಕೋಮಲವು ಚಂದ್ರಮೌಳಿಯು ಆದ ನಿನ್ನ ಸ್ವರೂಪವನ್ನು ಧ್ಯಾನಿಸುವ ಪುರುಷನಿಗೆ ಸಿದ್ಧಿಸದೆ ಇರುವುದಾವುದು ಉಂಟು ಹೇ ದೇವಿ ।

ಆತಂಗೆ ವಾರಿಧಿಯೆ ಲೀಲಾಸರೋವರವು, ನಂದನವು ವಿಹರಿಸುವ ಉದ್ಯಾನವಾದಪುದು, ಭೂತಳವೆ ಅವನ ಸಿಂಹಾಸನವು ಭಾವಿಸಲ್ ವಾಗ್ದೇವಿ ಕಿಂಕರಿಯು, ಶ್ರೀದೇವಿಯವನ ಆಜ್ಞೆಯ ತಾನೆ ಪಾಲಿಪಳ್ ॥೬॥

ಸರ್ವತೀರ್ಥಾತ್ಮಿಕೇ, ಸರ್ವಮಂತ್ರಾತ್ಮಿಕೇ, ಸರ್ವತಂತ್ರಾತ್ಮಿಕೇ, ಸರ್ವ-ಯಂತ್ರಾತ್ಮಿಕೇ, ಸರ್ವಪೀಠಾತ್ಮಿಕೇ, ಸರ್ವತತ್ತ್ವಾತ್ಮಿಕೇ, ಸರ್ವವಿದ್ಯಾತ್ಮಿಕೇ, ಸರ್ವಯೋಗಾತ್ಮಿಕೇ, ಸರ್ವನಾದಾತ್ಮಿಕೇ ಸರ್ವದೀಕ್ಷಾತ್ಮಿಕೇ, ಸರ್ವ-ಸರ್ವಾತ್ಮಿಕೇ, ಸರ್ವಗೇ, ಹೇ ಜಗನ್ಮಾತೃಕೇ, ಕಾಪಾಡು ನನ್ನನ್ನು, ಕಾಪಾಡು ನನ್ನನ್ನು, ಕಾಪಾಡು ನನ್ನನ್ನು ದೇವಿ! ನಿನಗೆ ನಮನ, ದೇವಿ! ನಿನಗೆ ನಮನ, ದೇವಿ! ನಿನಗೆ ನಮನವು. ॥ ೭ ॥

ಶ್ರೀ ಶ್ಯಾಮಲಾನವರತ್ನ ಮಾಲಿಕಾ

ಧ್ಯಾನಮ್

ಕುಚಾಂಚಿತ ವಿಪಂಚಿಕಾಂ
   ಕುಟಿಲ ಕುಂತಲಾಲಂಕೃತಾಂ
ಕುಶೇಶಯ ನಿವೇಶಿನೀಂ
   ಕುಟಿಲ ಚಿತ್ತವಿದ್ವೇಷಿಣೀಮ್ ।

ಮದಾಲಸ ಗತಿಪ್ರಿಯಾಂ
   ಮನಸಿಜಾರಿ ರಾಜ್ಯಶ್ರಿಯಂ
ಮತಂಗಕುಲಕನ್ಯಕಾಂ
   ಮಧುರ ಭಾಷಿಣೀ ಮಾಶ್ರಯೇ ॥ ೧ ॥

ಕುಂದ ಮುಕುಲಾಗ್ರ ದಂತಾಂ
   ಕುಂಕುಮ ಪಂಕೇನ ಲಿಪ್ತಕುಚ ಭಾರಾಮ್ ।
ಆ ನೀಲ ನೀಲ ದೇಹಾಮ್
   ಅಂಬಾಮ್ ಅಖಿಲಾಂಡ ನಾಯಿಕಾಂ ವಂದೇ ॥ ೨ ॥

ಸ್ತೋತ್ರಮ್

ಓಂಕಾರ ಪಂಜರ ಶುಕೀಮ್
   ಉಪನಿಷದ್ ಉದ್ಯಾನ ಕೇಲಿ ಕಲಕಂಠೀಮ್ ।
ಆಗಮ ವಿಪಿನ ಮಯೂರೀಮ್
   ಆರ್ಯಾಮ್ ಅಂತರ್ವಿಭಾವಯೇ ಗೌರೀಮ್ ॥ ೧ ॥

ದಯಮಾನ ದೀರ್ಘ ನಯನಾಂ
   ದೇಶಿಕ ರೂಪೇಣ ದರ್ಶಿತಾಭ್ಯುದಯಾಮ್ ।
ವಾಮಕುಚ ನಿಹಿತ ವೀಣಾಂ
   ವರದಾಂ ಸಂಗೀತ ಮಾತೃಕಾಂ ವಂದೇ ॥ ೨ ॥

ಶ್ರೀ ಶಂಕರಭಗವತ್ಪಾದ ವಿರಚಿತಾ

ಶ್ಯಾಮಲಾನವರತ್ನಮಾಲಿಕಾ

ಧ್ಯಾನ

ಮತಂಗ ಮುನಿಯ ವಂಶದಲ್ಲಿ ಹುಟ್ಟಿದ ಕನ್ಯಕೆಯೂ ಮಧುರ-ಭಾಷಿಣಿಯೂ ಆದ ಶ್ಯಾಮಲಾದೇವಿಗೆ ಶರಣಾಗಿದ್ದೇನೆ. ಅವಳು ತನ್ನ ಸ್ತನಕ್ಕೆ ತಾಗುವಂತೆ ವೀಣೆಯನ್ನು ಹಿಡಿದುಕೊಂಡಿದ್ದಾಳೆ. ಗುಂಗುರು ಕೂದಲು ಅವಳ ಮುಖವನ್ನಲಂಕರಿಸಿದೆ. ಆ ದೇವಿಯು ಕಮಲ-ವಾಸಿನಿಯೂ ಕುಟಿಲಬುದ್ಧಿಯವರನ್ನು ದ್ವೇಷಿಸತಕ್ಕವಳೂ ಆಗಿದ್ದಾಳೆ. ಮದಾಲಸೆಯಾಗಿ ಮೆಲ್ಲಗೆ ನಡೆಯುವುದು ಅವಳಿಗೆ ಪ್ರಿಯ. ಮನ್ಮಥ-ವೈರಿಯಾದ ಈಶ್ವರನ ರಾಜ್ಯಲಕ್ಷ್ಮಿ ಅವಳು. ॥ ೧ ॥

ಮಲ್ಲಿಗೆ ಮೊಗ್ಗಿನ ತುದಿಯಂತೆ ದಂತಪಂಕ್ತಿಯುಳ್ಳವಳೂ, ಕುಂಕುಮ ಕೇಸರಿಯ ಗಂಧವನ್ನು ಎಳೆದು ಬಳಿದುಕೊಂಡವಳೂ, ಎಣ್ಣೆಗಪ್ಪಿನ (ಸ್ವಲ್ಪಕಪ್ಪಾದ) ದೇಹದವಳೂ ಅಖಿಲಬ್ರಹ್ಮಾಂಡಕ್ಕೆ ಒಡತಿಯಾದವಳೂ ಆದ, ನನ್ನ ತಾಯಿ ಶ್ಯಾಮಲೆಗೆ ನಮಸ್ಕಾರ. ॥ ೨ ॥

ಸ್ತೋತ್ರ

ಓಂಕಾರವೆಂಬ ಪಂಜರದಲ್ಲಿರುವ ಹೆಣ್ಣುಗಿಳಿಯೂ (ಓಂಕಾರ ಪ್ರತಿಪಾದ್ಯಳೂ), ಉಪನಿಷತ್ತುಗಳ ಉದ್ಯಾನವನದಲ್ಲಿ ವಿಹರಿಸುವ ಕೋಗಿಲೆಯೂ, ವೇದಾರಣ್ಯಗಳಲ್ಲಿ ಮೆರೆಯುವ ಹೆಣ್ಣುನವಿಲೂ, ಪೂಜ್ಯಳೂ ಆದ ಗೌರೀದೇವಿಯನ್ನು ಹೃದಯದಲ್ಲಿ ಧ್ಯಾನಿಸುತ್ತೇನೆ.

ದಯೆಯನ್ನು ಸೂಸುವ ವಿಶಾಲಾಕ್ಷಿಯೂ, ಗುರುವಿನ ರೂಪದಲ್ಲಿ ನನ್ನ ಶ್ರೇಯಸ್ಸನ್ನು ಪ್ರಕಟಿಸಿದವಳೂ, ವಾಮಸ್ತನಕ್ಕೆ ತಾಗುವಂತೆ ವೀಣೆ-ಯನ್ನು ಹಿಡಿದವಳೂ, ಸಂಗೀತಶಾಸ್ತ್ರಕ್ಕೆ ಮಾತೆಯೂ, ವರದೆಯೂ ಆದ ಆ ದೇವಿಯನ್ನು ವಂದಿಸುತ್ತೇನೆ.

ಶ್ಯಾಮತನು ಸೌಕುಮಾರ್ಯಾಂ
ಸೌಂದರ್ಯಾನಂದ ಸಂಪದುನ್ಮೇಷಾಮ್ ।
ತರುಣಿಮ ಕರುಣಾ ಪೂರಾಂ
ಮದಜಲ ಕಲ್ಲೋಲ ಲೋಚನಾಂ ವಂದೇ ॥ ೩ ॥

ನಖ ಮುಖ ಮುಖರಿತ ವೀಣಾ-
ನಾದ ರಸಾಸ್ವಾದ ನವ ನವೋಲ್ಲಾಸಮ್ ।
ಮುಖಮಂಬ ಮೋದಯತು ಮಾಂ
ಮುಕ್ತಾ ತಾಟಂಕ ಮುಗ್ಧ ಹಸಿತಂ ತೇ ॥ ೪ ॥

ಸರಿಗಮಪಧ ನಿರತಾಂ ತಾಂ
ವೀಣಾ ಸಂಕ್ರಾಂತ ಕಾಂತ ಹಸ್ತಾಂ ತಾಮ್ ।
ಶಾಂತಾಂ ಮೃದುಲ ಸ್ವಾಂತಾಂ
ಕುಚಭರ ತಾಂತಾಂ ನಮಾಮಿ ಶಿವಕಾಂತಾಮ್ ॥ ೫ ॥

ಅವಟು ತಟ ಘಟಿತ ಚೂಲೀ-
ತಾಡಿತ ತಾಲೀ ಪಲಾಶ ತಾಟಂಕಾಮ್ ।
ವೀಣಾ ವಾದನ ವೇಲಾ-
ಕಂಪಿತ ಶಿರಸಂ ನಮಾಮಿ ಮಾತಂಗೀಮ್ ॥ ೬ ॥

ವೀಣಾ ರವಾನುಷಂಗಂ
ವಿಕಚ ಮುಖಾಂಭೋಜ ಮಾಧುರೀ ಭೃಂಗಮ್ ।
ಕರುಣಾ ಪೂರ ತರಂಗಂ
ಕಲಯೇ ಮಾತಂಗ ಕನ್ಯಕಾಪಾಂಗಮ್ ॥ ೭ ॥

ಮಣಿಭಂಗ ಮೇಚಕಾಂಗೀಂ
ಮಾತಂಗೀಂ ನೌಮಿ ಸಿದ್ಧಮಾತಂಗೀಮ್ ।
ಯೌವನ ವನ ಸಾರಂಗೀಂ
ಸಂಗೀತಾಂಭೋರುಹಾನುಭವ ಭೃಂಗೀಮ್ ॥ ೮ ॥

ಸುಕುಮಾರ ಶ್ಯಾಮಲ ತನು ಉಳ್ಳವಳೂ, ಸೌಂದರ್ಯ-ಆನಂದ -ಸಂಪತ್ತುಗಳನ್ನು ನೀಡತಕ್ಕವಳೂ, ಅತ್ಯಂತ ದಯಾಳುವೂ, ಮದಜಲ-ವನ್ನು ಸ್ರವಿಸುವ ಲೋಚನಗಳುಳ್ಳವಳೂ ಆದ ದೇವಿಯನ್ನು ನಮಿಸುತ್ತೇನೆ. ॥ ೩ ॥

ಅಮ್ಮ, ನಿನ್ನ ಉಗುರಿನ ತುದಿಯಿಂದ ಮೀಟಿದಾಗ ಧ್ವನಿ ಮಾಡುವ ವೀಣೆಯ ನಾದರಸವನ್ನು ಆಸ್ವಾದಿಸುತ್ತ ಉಲ್ಲಾಸವನ್ನು ತಳೆದಿರುವಂತಹ, ಮುತ್ತಿನ ಓಲೆಯಿಂದ ಕಂಗೊಳಿಸುತ್ತ, ಮಂದಸ್ಮಿತಸುಂದರವಾದ ನಿನ್ನ ಮುಖವು ನನಗೆ ಸಂತೋಷವನ್ನುಂಟು ಮಾಡುತ್ತಿರಲಿ! ॥ ೪ ॥

ಸರಿಗಮಪಧ -ಎಂದು ನುಡಿಸುವುದರಲ್ಲಿ ನಿರತಳೂ, ವೀಣೆಯ ಮೇಲೆ ಸುಂದರವಾದ ಕೈಯ ತುದಿಯನ್ನು ಆಡಿಸುತ್ತಿರುವವಳೂ, ಶಾಂತಳೂ, ಮೃದು ಹೃದಯಳೂ, ಕುಚಭಾರದಿಂದ ಬಾಗಿದವಳೂ ಆದ ಪರಮಶಿವಕಾಂತೆಯನ್ನು ವಂದಿಸುತ್ತೇನೆ. ॥ ೫ ॥

ಕುತ್ತಿಗೆಯ ಪಾರ್ಶ್ವದಲ್ಲಿ ಜಾರಿದ ತಲೆಗೂದಲಿನಿಂದ ತಾಡಿತವಾದ ಕೇದಗೆಯ ದಳದಂತಿರುವ ಕಿವಿಯೋಲೆಯುಳ್ಳವಳೂ, ವೀಣೆಯನ್ನು ನುಡಿಸುತ್ತ ತಲೆಯನ್ನಲ್ಲಾಡಿಸುತ್ತಿರುವವಳೂ ಆದ ಮಾತಂಗೀದೇವಿ-ಯನ್ನು ನಮಸ್ಕರಿಸುತ್ತೇನೆ. ॥ ೬ ॥

ವೀಣಾಧ್ವನಿಯೇ ಗುಂಯ್ ಶಬ್ದವಾಗಿರುವ ಮತ್ತು ಅರಳಿದ ಮುಖಕಮಲದ ಮಾಧುರ್ಯವನ್ನು ಸವಿಯಲು ಬಂದ ದುಂಬಿಯಾದ, ಕರುಣಾರಸದ ಅಲೆಗಳಿಂದ ತುಂಬಿದ, ಮಾತಂಗಕನ್ಯೆಯ ಅಪಾಂಗವನ್ನು ಧ್ಯಾನಿಸುತ್ತೇನೆ. ॥ ೭ ॥

ಸೀಳಿದ ನೀಲಮಣಿಯಂತೆ ಶ್ಯಾಮಲಾಂಗಿಯೂ, ಮಾತಂಗಮುನಿಯ ಪುತ್ರಿಯೂ ಆದ, ಅಷ್ಟಸಿದ್ಧಿಗಳನ್ನು ಪಡೆದಿರುವ ಮಾತಂಗೀದೇವಿಯನ್ನು ವಂದಿಸುತ್ತೇನೆ. ಅವಳು ಯೌವನವನದಲ್ಲಿ ಸಂಚರಿಸುವ ಹೆಣ್ಣುಜಿಂಕೆ-ಯಾಗಿದ್ದಾಳೆ. ಸಂಗೀತವೆಂಬ ತಾವರೆಯ ಹೂವಿನ ಆಸ್ವಾದವನ್ನು ಅನುಭವಿಸುವ ಹೆಣ್ಣುದುಂಬಿಯಾಗಿದ್ದಾಳೆ. ॥ ೮ ॥

ಮೇಚಕಮ್ ಆಸೇಚನಕಂ
ಮಿಥ್ಯಾ ದೃಷ್ಟಾಂತ ಮಧ್ಯಭಾಗಂ ತೇ ।
ಮಾತಃ ಸ್ವರೂಪಮನಿಶಂ
ಮಂಗಲಸಂಗೀತ ಸೌರಭಂ ವಂದೇ ॥ ೯ ॥

ಫಲಶ್ರುತಿ

ನವರತ್ನಮಾಲ್ಯಮೇತತ್
ರಚಿತಂ ಮಾತಂಗ ಕನ್ಯಕಾಭರಣಮ್ ।
ಯಃ ಪಠತಿ ಭಕ್ತಿಯುಕ್ತಃ
ಸ ಭವೇದ್ ವಾಗೀಶ್ವರಃ ಸಾಕ್ಷಾತ್ ॥

ಇತಿ ಶ್ರೀಮತ್ ಶಂಕರ ಭಗವತ್ಪಾದಾಚಾರ್ಯ ವಿರಚಿತಾ
ಶ್ಯಾಮಲಾ ನವರತ್ನ ಮಾಲಿಕಾ ಸಂಪೂರ್ಣಾ ॥

ಹೇ ತಾಯೆ, ನಿನ್ನ ಕಟಿಭಾಗವು ಮಿಥ್ಯೆಗೆ ಒಂದು ಉದಾಹರಣೆ-ಯಾಗಿದೆ. (ತುಂಬ ಕೃಶವಾದದ್ದು ಎಂದು ಅಭಿಪ್ರಾಯ.) ಮಂಗಳಕರ-ವಾದ ಸಂಗೀತದ ಸುಗಂಧವೇ ಆದ ನಿನ್ನ ಸ್ವರೂಪಕ್ಕೆ ಸದಾ ನಮಸ್ಕಾರ-ವನ್ನು ಮಾಡುತ್ತೇನೆ. ॥ ೯ ॥

ಫಲಶ್ರುತಿ

ಮಾತಂಗಕನ್ಯೆಯಾದ ಶ್ಯಾಮಲಾದೇವಿಗೆ ಆಭರಣವಾದದ್ದು ಈ ನವರತ್ನಮಾಲೆ. ಯಾವಾತನು ಭಕ್ತಿಯುಕ್ತನಾಗಿ ಇದನ್ನು ಪಠಿಸುವನೋ ಆತನು ವಾಕ್ಕುಗಳಿಗೆ ಅಧಿಪತಿಯೇ ಆಗಿ ಬಿಡುವನು (ಒಳ್ಳೆಯ ವಾಗ್ಮಿಯಾಗುವನು).

❖ ❖ ❖

ಶ್ಯಾಮಲಾ-ಮಾತಂಗೀ

ಮಾತಂಗ ಎಂಬುವನು ಒಬ್ಬ ಮಹರ್ಷಿ. ಈತನು ಮತಂಗ ಮುನಿಯ ಮಗ. ಮಹಾತಪಸ್ವಿ, ಹಿಮವಂತನು ಇವನ ಸ್ನೇಹಿತ- ನಾಗಿದ್ದನು. ಒಂದು ದಿನ ಹಿಮವಂತನು ತಾನು ಪಾರ್ವತೀ ದೇವಿಯ ತಂದೆಯೆಂದು ಅಹಂಕಾರದಿಂದ ಮಾತಾಡಿದನು. ಆಗ ಮಾತಂಗ ಮಹರ್ಷಿಯು ತಾನೂ ತಪಸ್ಸು ಮಾಡಿ ಲಲಿತಾ ದೇವಿಯನ್ನು ಮಗಳನ್ನಾಗಿ ಪಡೆಯಬೇಕೆಂದು ಘೋರವಾದ ತಪಸ್ಸಿನಲ್ಲಿ ನಿರತನಾದನು. ಲಲಿತಾದೇವಿಯ ಸಹಚರಿಯೂ ಅವಳ ವಿಭೂತಿ ಸ್ವರೂಪಳೂ ಆದ ಶ್ಯಾಮಲಾದೇವಿಯು ಪ್ರಸನ್ನಳಾದಳು. ಮಹರ್ಷಿಯ ಪ್ರಾರ್ಥನೆಯಂತೆ ಆತನ ಪತ್ನಿಯಾದ ಸಿದ್ಧಿಮತಿಯ ಗರ್ಭದಿಂದ ಪುತ್ರಿಯಾಗಿ ಅವತರಿಸಿದಳು. ಅವಳ ಹೆಸರು ಲಘುಶ್ಯಾಮಲೆ. ಅವಳು ಮಹಾತಪಸ್ವಿನಿಯಾಗಿ ಲಲಿತಾ ಪರಮೇಶ್ವರಿಯ ಕೃಪಾಕಟಾಕ್ಷಗಳನ್ನು ಪಡೆದು ಸ್ವತಃ ಪರಮೇಶ್ವರಿಯೇ ಆಗಿ ವಿರಾಜಿಸಿದಳು. ಶ್ಯಾಮಲಾ, ಮಾತಂಗೀ, ಲಲಿತಾ ಪರಮೇಶ್ವರೀ, ಪಾರ್ವತೀ, ದುರ್ಗಾ ಇವೆಲ್ಲವೂ ಒಬ್ಬಳೇ ದೇವತೆಯ ಲೀಲಾವತಾರಗಳು.

೪. ಶ್ರೀ ಶಾರದಾದಂಡಕಮ್

ಧ್ಯಾನ ಶ್ಲೋಕಗಳು

ಶುಕ್ಲಾಂಬರಧರಂ ವಿಷ್ಣುಂ ಶಶಿವರ್ಣಂ ಚತುರ್ಭುಜಮ್ ।
ಪ್ರಸನ್ನವದನಂ ಧ್ಯಾಯೇತ್ ಸರ್ವವಿಘ್ನೋಪಶಾಂತಯೇ ॥

ಗುರುರ್ಬ್ರಹ್ಮಾ ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ ।
ಗುರುಃ ಸಾಕ್ಷಾತ್ ಪರಂ ಬ್ರಹ್ಮ ತಸ್ಮೈ ಶ್ರೀಗುರವೇ ನಮಃ ॥

ಶಾರದಾ ಚಂದ್ರಮೌಲೀಶಂ ರತ್ನಗರ್ಭಂ ಗಣೇಶ್ವರಮ್ ।
ಶೃಂಗಾದ್ರೌ ಗುರುರಾಜಂ ಚ ಪ್ರಣಮಾಮಿ ಪುನಃ ಪುನಃ ॥

ಅವತೀರ್ಣಶ್ಚ ಕಾಲಟ್ಯಾಂ ಕೇದಾರೇಽಂತರ್ಹಿತಶ್ಚ ಯಃ ।
ಚತುಷ್ಪೀಠ ಪ್ರತಿಷ್ಠಾತಾ ಜಯತಾತ್ ಶಂಕರೋ ಗುರುಃ ॥

ಶಂಕರ ದೇಶಿಕ ವಿರಚಿತ ಪೀಠಾಧಿಪ ಮಾಲಿಕಾ ಮಹಾರತ್ನಮ್ ।
ಪ್ರಣಮಾಮಿ ಚಂದ್ರಶೇಖರ ಭಾರತ್ಯಭಿಧಾನ ದೇಶಿಕಂ ಹೃದಯೇ ॥

ಅಖಿಲಾನಂದ ಸಂಧಾಯೀ ಮನೋಜ್ಞ ಮುಖ ಪಂಕಜಮ್ ।
ಜಗದ್ಗುರುಂ ಜಗತ್ಪೂಜ್ಯಂ ವಿದ್ಯಾತೀರ್ಥಮ್ ಅಹಂ ಭಜೇ ॥

ಅಜ್ಞಾನಾಂ ಜಾಹ್ನವೀ ತೀರ್ಥಂ ವಿದ್ಯಾ ತೀರ್ಥಂ ವಿವೇಕಿನಾಮ್ ।
ಸರ್ವೇಷಾಂ ಸುಖದಂ ತೀರ್ಥಂ ಭಾರತೀ ತೀರ್ಥಮ್ ಆಶ್ರಯೇ ॥

ಮಾಲಾ ಸುಧಾ ಕುಂಭ ವಿಬೋಧ ಮುದ್ರಾ
ವಿದ್ಯಾ ವಿರಾಜತ್ ಕರ ವಾರಿಜಾತಾಮ್ ।
ಅಪಾರ ಕಾರುಣ್ಯ ಸುಧಾಂಬುರಾಶಿಂ
ಶ್ರೀ ಶಾರದಾಂಬಾಂ ಪ್ರಣತೋಽಸ್ಮಿ ನಿತ್ಯಮ್ ॥

ಶ್ರೀ ಶಾರದಾಗೀತಮ್

ಕಲ್ಯಾಣಾನಿ ತನೋತು ಕಾಪಿ ತರುಣೀ
ಶೃಂಗಾದ್ರಿ ಭೂಷಾಯಿತಾ
ಶ್ರೀ ಮಚ್ಛಂಕರ ದೇಶಿಕೇಂದ್ರ ಕಲಿತಂ
ಚಕ್ರಂ ಸದಾಧಿಷ್ಠಿತಾ ।

ದೂರಸ್ಥಾಮಪಿ ಪಾದ ನಮ್ರ ಜನತಾಂ
ವಿದ್ಯಾಯುರಾರೋಗ್ಯಸತ್-
ಸಂತತ್ಯಾದಿ ಮನೋರಥಾಪ್ತಿಸಹಿತಾಂ
ಸಂತನ್ವತೀ ಸತ್ವರಮ್ ॥ ೧ ॥

ಶಾರದಾಂಬ ಶರದಿಂದು ನಿಭಾನನ
ಭಾಸಿತ ನಿಖಿಲ ದಿಗಂತೇ
ಪಾರದೇ ಭವ ಮಹಾಜಲ ರಾಶೇಃ
ಪಾವಯ ಮಾಂ ವಿಧಿಕಾಂತೇ ।

ದಂತ ಕಾಂತಿ ಜಿತ ಕುಂದ ಸುಮೇ
ವರ ಕುಂತಲ ನಿರ್ಧೂತ ಭೃಂಗೇ
ಶಾಂತ ಚಿತ್ತಜನ ಸಂತತ ಚಿಂತಿತ
ಕೋಟಿ ಚಂದ್ರ ಸದೃಶಾಂಗೇ ॥ ೨ ॥

ಪಾದನಮ್ರಜನ ವಾಂಛಿತ ಪೂರಣ
ನಿರ್ಜಿತ ನಂದನವಲ್ಲಿಕೇ
ಮಾದನೇಷ್ವಸನ ಗರ್ವ ನಿಬರ್ಹಣ
ದಕ್ಷ ಮನೋಹರ ಚಿಲ್ಲಿಕೇ ।

ಋಷ್ಯಶೃಂಗ ಪುರವಾಸ ವಿಲೋಲೇ
ವಶ್ಯಯಂತ್ರ ಸದೃಶಾಸ್ಯೇ
ಪಶ್ಯದಂಘ್ರಿ ಶುಕ ದೇವಹೂತಿ ಸುತ
ಕಶ್ಯಪಾದಿ ಸಮುಪಾಸ್ಯೇ ॥ ೩ ॥

ಶ್ರೀ ಶಾರದಾಗೀತಮ್

ಶೃಂಗಗಿರಿಗೆ ಭೂಷಣಪ್ರಾಯಳೂ ವರ್ಣನೆಗೆ ನಿಲುಕದವಳೂ ಆದ ಆ ದಿವ್ಯತರುಣಿಯು ಸರ್ವರಿಗೂ ಕಲ್ಯಾಣಸಂತತಿಯನ್ನು ಉಂಟು-ಮಾಡಲಿ. ಶ್ರೀಶಂಕರಭಗವತ್ಪಾದಾಚಾರ್ಯರಿಂದ ಸ್ಥಾಪಿತವಾದ ಶ್ರೀಚಕ್ರ-ದಲ್ಲಿ ಸದಾ ಅಧಿಷ್ಠಿತಳಾದವಳು ಅವಳು.

ಅವಳ ಪಾದಗಳಿಗೆ ಶರಣಾದ ಜನತೆಯು ದೂರದಲ್ಲಿದ್ದರೂ ನಮ್ರ-ರಾದ ಅವರಿಗೆ ವಿದ್ಯೆ, ಆಯುಸ್ಸು, ಆರೋಗ್ಯ, ಒಳ್ಳೆಯ ಸಂತತಿ -ಮುಂತಾದ ಮನೋರಥಗಳನ್ನು ಶೀಘ್ರದಲ್ಲಿ ಅನುಗ್ರಹಿಸತಕ್ಕ ಶಾರದಾ ದೇವಿಯೇ ಅವಳು. ॥ ೧ ॥

ಹೇ ಶಾರದಾಂಬ, ಶರತ್ಕಾಲದ ಚಂದ್ರನಂತಿರುವ ಮುಖದಿಂದ ನಿಖಿಲ ದಿಗಂತಗಳನ್ನೂ ಬೆಳಗತಕ್ಕವಳೆ, ಸಂಸಾರವೆಂಬ ಈ ಮಹಾ-ಸಾಗರದಿಂದ ನನ್ನನ್ನು, ಹೇ ಬ್ರಹ್ಮರಾಣಿ, ಪಾರುಗಾಣಿಸತಕ್ಕವಳಾಗು.

ಹಲ್ಲುಗಳ ಕಾಂತಿಯಿಂದ ಮಲ್ಲಿಗೆಯ ಹೂಗಳನ್ನು ಜಯಿಸಿದವಳೆ, ದುಂಬಿಗಳನ್ನು ಮುಂಗುರುಳಿನಿಂದ ಪರಾಭವಗೊಳಿಸಿದವಳೆ, ಶಾಂತ-ಚಿತ್ತರಾದ ಜನರಿಂದ ಸದಾ ಧ್ಯಾನಿಸಲ್ಪಡತಕ್ಕವಳೂ ಕೋಟಿ ಚಂದ್ರರಿಗೆ ಸಮವಾದ ಅಂಗಕಾಂತಿಯುಳ್ಳವಳೂ ಆದ ಹೇ ಶಾರದೆ. ॥ ೨ ॥

ನಿನ್ನ ಪಾದಗಳಿಗೆ ವಂದಿಸುವ ಭಕ್ತರ ವಾಂಛಿತವನ್ನು ಪೂರಣ ಮಾಡುವುದರಲ್ಲಿ ನಂದನವನದ ಕಲ್ಪಲತೆಯನ್ನು ಮೀರಿಸಿದವಳು ನೀನು. ಮನ್ಮಥನ ಬಿಲ್ಲಿನ ಗರ್ವವನ್ನು ಧ್ವಂಸಗೊಳಿಸುವುದರಲ್ಲಿ ದಕ್ಷವಾದ ಮನೋಹರವಾದ ಮುಂಗುರುಳು ನಿನಗಿದೆ.

ಶೃಂಗಗಿರಿನಗರದಲ್ಲಿ ವಾಸಮಾಡಲು ಕುತೂಹಲವುಳ್ಳವಳೆ, ನಿನ್ನ ಮುಖವು ವಶೀಕರಣಗೊಳಿಸುವ ಯಂತ್ರದಂತೆ ಪ್ರಕಾಶಮಾನವಾಗಿದೆ. ಗೌತಮ, ಶುಕ, ದೇವಹೂತಿ ಪುತ್ರನಾದ ಕಪಿಲಮುನಿ, ಕಶ್ಯಪ -ಮೊದಲಾದ ಮಹರ್ಷಿಗಳಿಂದ ಉಪಾಸಿತಳಾದವಳೆ ಸಂಸಾರಸಮುದ್ರ-ದಿಂದ ನನ್ನನ್ನು ಎತ್ತಿ ರಕ್ಷಿಸು. ॥ ೩ ॥

ಶ್ರೀ ಶಾರದಾದಂಡಕಮ್

ಜಯ ಶೃಂಗಾದ್ರಿ ನಿಲಯೇ
ಜಯ ಶೃಂಗಾರ ದೇವತೇ ।
ಜಯ ತುಂಗಾ ತಟಾವಾಸೇ
ಜಯ ಭಂಗಾವಹೇ ಶುಚಃ ॥ ೧ ॥

ಜಯ ಜನನಿ, ಗಂಗಾನದೀ ತುಲ್ಯ ತುಂಗೋತ್ತರಂಗಾವಲೀ ಶೋಭಿ- ತುಂಗಾಧುನೀತೀರ ಸಂರಾಜಿ ಶೃಂಗಾದ್ರಿ ವಾಸ್ಯೈಕ ಲೋಲೇ, ಶರನ್ಮೇಘ ಸಂಕಾಶ ಚೇಲೇ ಕೃಪಾಂಭೋಧಿವೇಲೇ ॥ ೨ ॥

ಪಯೋಜಾತ ಶಂಕಾವಹಾ ತಾಮ್ರಪಾದ ದ್ವಯಾಗ್ರ ಪ್ರರಾಜನ್ನಖಾಗ್ರ- ಪ್ರಭೋತ್ಪಾದ್ಯ ಕಾದಂಬಶಂಕೇ ಧುತಾನಮ್ರ ಪಂಕೇ, ಶ್ರಿತಾಜೋತ್ತ- ಮಾಂಗೇ ॥ ೩ ॥

ತುಲಾಕೋಟಿ ಯುಗ್ಮಾರವಾಘೋಷಿತಾನಮ್ರ ಸಂತ್ರಾಣ ಸಂಬದ್ಧದೀಕ್ಷೇ, ಕಾಲಿತಾಶೇಷ ದೇವಾರಿ ಪಕ್ಷೇ, ರಮಾಕಾಂಕ್ಷ್ಯ ದೀವ್ಯತ್ ಕಟಾಕ್ಷೇ ॥ ೪ ॥

ಮನೋಜಾತ ತೂಣೀರ ವಿಸ್ರಂಭ ಸಂಹಾರಿ ಸುಸ್ನಿಗ್ಧ ಸಂವೃತ್ತ ಜಂಘಾದ್ವಯೇ ಮುದ್ರಿಕಾ ಬೋಧ್ಯ ಮಾನಾದ್ವಯೇಽನಾಥ ಹೀನಾರ್ತ ರಕ್ಷಾ ಸಮುದ್ಯದ್ದಯೇ ॥ ೫ ॥

ಶ್ರೀ ಶೃಂಗೇರಿ ಜಗದ್ಗುರು ಶ್ರೀ ಚಂದ್ರಶೇಖರಭಾರತೀ ಮಹಾಸ್ವಾಮಿಗಳಿಂದ ರಚಿತವಾದ

ಶ್ರೀಶಾರದಾದಂಡಕ

ಶೃಂಗೇರಿವಾಸಿನಿ ಜಯ, ಶೃಂಗಾರದೇವತೆಯೆ ಜಯ, ತುಂಗಾತೀರ-ನಿವಾಸಿನಿ ಜಯ, ಶೋಕನಾಶಿನಿ ಜಯ ॥ ೧ ॥

ಜಯ ಜನನಿ, ಗಂಗಾನದಿಗೆ ಸಮಾನವೂ ಉನ್ನತವಾದ ನೀರಿನ ಅಲೆಗಳಿಂದ ಶೋಭಿಸತಕ್ಕದ್ದೂ ಆದ ತುಂಗಾನದಿಯ ತೀರದಲ್ಲಿ ಶೋಭಿಸುವ ಶೃಂಗಗಿರಿಯಲ್ಲಿ ನೆಲಸಲು ವಿಶೇಷ ಆಸಕ್ತಿಯುಳ್ಳವಳೆ. ಶರತ್ಕಾಲದ ಮೋಡದಂತೆ ಶುಭ್ರವಾದ ಸೀರೆಯನ್ನು ಧರಿಸಿದವಳೆ, ಕೃಪಾಸಾಗರದ ಎಲ್ಲೆಯೆ, ನಿನಗೆ ಜಯವಾಗಲಿ. ॥ ೨ ॥

ತಾವರೆ ಹೂಗಳೋ ಎಂಬ ಸಂದೇಹವನ್ನುಂಟುಮಾಡುವ ನಿನ್ನ ಪಾದಗಳಲ್ಲಿರುವ ಉಗುರುಗಳ ಅಗ್ರಭಾಗದಲ್ಲಿರುವ ಕಾಂತಿಯು ಇವು ಉಗುರುಗಳೋ ಈಚಲ ಹೂಗಳೋ ಎಂಬ ಶಂಕೆಯನ್ನುಂಟು ಮಾಡುತ್ತವೆ. ನಿನಗೆ ನಮಸ್ಕರಿಸಿದವರ ಪಾಪಪಂಕವನ್ನು ಹೋಗಲಾಡಿಸ-ತಕ್ಕವಳೆ. ಬ್ರಹ್ಮನ ಶಿರಸ್ಸಿನಲ್ಲಿ ಮಂಡಿಸಿದವಳೆ. ॥ ೩ ॥

ಪಾದಾಭರಣಗಳಾದ ನೂಪುರಗಳ ಧ್ವನಿಯಿಂದ, ಭಕ್ತರನ್ನು ಸಂರಕ್ಷಿಸುವುದಕ್ಕೆ ಸಿದ್ಧಳಾಗಿದ್ದೇನೆಂದು ಘೋಷಿಸುತ್ತಾ ಇರತಕ್ಕವಳೆ, ದೇವಶತ್ರುಗಳಾದ ಎಲ್ಲ ಅಸುರರನ್ನೂ ಧ್ವಂಸಮಾಡಿದವಳೆ, ಲಕ್ಷ್ಮೀ-ದೇವಿಯೂ ಬಯಸುವ ದಿವ್ಯಕಟಾಕ್ಷವುಳ್ಳವಳೆ. ॥ ೪ ॥

ಮನ್ಮಥನ ಬತ್ತಳಿಕೆಯ ಸೊಗಸನ್ನು ಅಡಗಿಸುವ ಸುಂದರ-ವೃತ್ತಾಕಾರದ ಮೊಳಕಾಲುಗಳುಳ್ಳವಳೆ, ಜ್ಞಾನಮುದ್ರೆಯಿಂದ ಅದ್ವೈತ-ವನ್ನು ಬೋಧಿಸತಕ್ಕವಳೆ, ಅನಾಥರ ರಕ್ಷಣೆಗಾಗಿ ಉಕ್ಕುವ ಕಾರುಣ್ಯ-ವುಳ್ಳವಳೆ. ॥ ೫ ॥

ಕುಂದೇಂದು ದುಗ್ಧಾಬ್ಧಿ ನೀಹಾರ ಘನಸಾರ ಹಂಸಾದ್ಯಹಂತಾ ನಿಹಂತ್ರಚ್ಛ ವಸ್ತ್ರೋತ್ತಮ ಚ್ಛನ್ನ ದಿವ್ಯೋರು ದೂರೀಕೃತಾ ಭಸ್ಮಸಂಲಿಪ್ತ ದೇವೇಂದ್ರ ಮಾತಂಗ ಶುಂಡಾಚ್ಛ ರಂಭಾವಲೀ ಡಂಬರೇ, ಶ್ರಿತ ಜನಾಶೇಷ ದೋಷ ನಿಕುರುಂಬ ಸಹನಾಧರೀಭೂತ ವಿಶ್ವಂಭರೇ, ಮಧ್ಯ ಭಾಗೋಪ-ಮಾನಾಂಬರೇ ॥ ೬ ॥

ಸಖೀವತ್ ತ್ರಿವರ್ತ್ಮ್ಯತ್ವ ಸಂಪ್ರೇಪ್ಸು ಭಾಸ್ವತ್ತನೂಜೇತಿ ಶಂಕಾಕುರೋತ್ಪಾದ ದಕ್ಷ ತ್ರಿವಲ್ಲ್ಯಂತರಾಭಾಸಿ ರೋಮಾವಲೀ ರಾಜಿತೇ, ಪದೇ ದೇವ ಮಾಣಿಕ್ಯ ಕೋಟೀರ ನೀರಾಜಿತೇ, ಸರ್ವ ಸಂಪೂಜಿತೇ ॥ ೭ ॥

ಸುಧಾಪೂರ್ಣ ಸೌವರ್ಣ ಕುಂಭೋಪಮೋರೋಜ ಯುಗ್ಮಸ್ಥ ದುಗ್ಧೋತ್ಥ ನವನೀತ ಕಣರಾಶಿ ಸಂದೇಹ ಸಂದಾಯಿ ಮುಕ್ತಾಸರೇ, ದಿವ್ಯ ರತ್ನಾವಲೀ ಭಾಸುರೇ, ಸುಗುಣ ರತ್ನಾಕರೇ,

ಧರ್ಮಾದಿ ಪುರುಷಾರ್ಥ ವಿಶ್ರಾಣನಾರ್ಥಾತ್ತ ಹಸ್ತದ್ವಯೀ ಯುಗ್ಮ ಪಂಕೇರುಹಾಭಾಸಿ ಮಾಣಿಕ್ಯ ಕೇಯೂರ ಶೋಭಾ ಪ್ರವಾಲಾಢ್ಯ-

ಮಲ್ಲಿಗೆ, ಚಂದ್ರ, ಕ್ಷೀರಸಮುದ್ರ, ಹಿಮ, ಕರ್ಪೂರ, ಹಂಸ ಮುಂತಾದ ವಸ್ತುಗಳ ಅಹಂಕಾರವನ್ನು ಮೊಟಕುವ ಬಿಳಿಯ ಉತ್ತಮ ಸೀರೆಯಿಂದ ಆವೃತವಾದ ನಿನ್ನ ತೊಡೆಗಳು ಭಸ್ಮದಿಂದ ಲಿಪ್ತವಾದ ದೇವೇಂದ್ರ ಐರಾವತದ ಸೊಂಡಿಲನ್ನೂ ಶುದ್ಧವಾದ ಬಾಳೆಯ ಮರದ ಸೊಬಗನ್ನೂ ತಳ್ಳಿಹಾಕುತ್ತಿವೆ. ಆಶ್ರಿತರಾದ ಜನರ ಎಲ್ಲ ದೋಷ-ರಾಶಿಗಳನ್ನು ಸಹಿಸುತ್ತಿರುವುದರಿಂದ ನೀನು ವಿಶ್ವಂಭರೆಯೆನಿಸಿದ ಭೂದೇವಿಯನ್ನೂ ಮೀರಿಸಿದ್ದೀಯೆ. ನಿನ್ನ ಕಟಿಮಧ್ಯವು ಆಕಾಶಕ್ಕೆ ಸಮಾನವಾಗಿದೆ. (ಚಿಕ್ಕದಾದ್ದರಿಂದ ಕಾಣಿಸುವುದಿಲ್ಲ) ॥ ೬ ॥

ತನ್ನ ಸಖಿಯಾದ ಗಂಗೆಯು ತ್ರಿಪಥಗೆಯಾಗಿರುವಂತೆ ನೀನೂ ತ್ರಿಪಥಗೆಯಾಗಿಬಿಟ್ಟೆಯೋ ಎಂಬ ಸಂದೇಹದಿಂದ ನಿನ್ನ (ಉದರದ ಮೇಲಿರುವ) ತ್ರಿವಳಿಗಳನ್ನು ನೋಡುವುದಕ್ಕಾಗಿ ಬಂದ ಯಮುನೆಯೋ ಎಂಬಂತೆ ತ್ರಿವಳಿಯ ನಡುವೆ ರಾಜಿಸುವ ರೋಮಾವಳಿಯಿಂದ ಶೋಭಿಸುತ್ತಿರುವೆ! ನಿನ್ನ ಪಾದಗಳ ಬಳಿಯಲ್ಲಿ ದೇವತೆಗಳು ತಮ್ಮ ಮಾಣಿಕ್ಯಖಚಿತವಾದ ಕಿರೀಟಗಳಿಂದ ನಿನಗೆ ಆರತಿಯನ್ನೆತ್ತುತ್ತಿದ್ದಾರೆ. ಸರ್ವಪೂಜಿತಳು ನೀನು. ॥ ೭ ॥

(ಯಮುನಾನದಿ ಕಪ್ಪಾಗಿದೆ. ಅಂತೆಯೇ ದೇವಿಯ ರೋಮಾವಳಿ. ಆಕಾಶ, ಭೂಮಿ, ಪಾತಾಳ -ಈ ಮೂರು ಮಾರ್ಗಗಳಲ್ಲಿ ಹರಿದದ್ದರಿಂದ ಗಂಗಾನದಿ ತ್ರಿಪಥಗಾ ಎನಿಸಿದಳು).

ಚಿನ್ನದ ಅಮೃತಕಲಶಗಳಂತಿರುವ ನಿನ್ನ ಸ್ತನಗಳ ಕ್ಷೀರದಿಂದಾದ ಬೆಣ್ಣೆಯ ಕಣಗಳೋ ಎಂಬಂತೆ ನಿನ್ನ ಮುತ್ತಿನ ಸರವಿದೆ. ದಿವ್ಯರತ್ನರಾಶಿ-ಗಳಿಂದ ಭೂಷಿತಳಾಗಿರುವೆ. ಸದ್ಗುಣಗಳೆಂಬ ರತ್ನಗಳ ಗಣಿಯಾಗಿ-ದ್ದೀಯೆ. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥ-ಗಳನ್ನು ಕೊಡುವುದಕ್ಕಾಗಿ ನೀಡಿದ ನಿನ್ನ ನಾಲ್ಕು ಕೈಗಳು ಕಮಲದ ಹೂಗಳಂತಿವೆ. ಆ ಹೂವುಗಳಿಂದ ಶೋಭಿಸುವ ನಿನ್ನ ಬಾಹುಲತೆಗಳಿಗೆ ಕಿರೀಟದ ಮಾಣಿಕ್ಯಮಣಿಗಳ ಕಾಂತಿಗಳು ಚಿಗುರೆಲೆಗಳಂತೆ ಕಾಣುತ್ತವೆ. ಆ

ಸದ್ದೋರ್ಲತಾಧಃ ಕೃತಾರಕ್ತ ಸಂಧ್ಯಾರ್ಕ ಪಾಶ್ಚಾತ್ಯ ಭಾಗಸ್ಥವಿದ್ಯುಲ್ಲತೇ, ವಿತರಣ ಪ್ರಕ್ರಿಯಾ ನ್ಯಕ್‌ಕೃತ ಸ್ವರ್ಲತೇ, ಧಾತೃಸಮ್ಮಾನಿತೇ ॥ ೮ ॥

ತಾರುಣ್ಯ ಚಂದ್ರೋದಯೋದ್ವೇಲ ಲಾವಣ್ಯ ವಾರಾಕರೋತ್ಪನ್ನಶಂಖ ಪ್ರವಾಲಾಭ ಕಂಠೋಷ್ಠಸಂಭಾಸುರೇ, ಚರಣ ಕಿಂಕರ ಸುರೇ, ಪೂಜಯದ್ ಭೂಸುರೇ । ಮುಖ ಚಂದ್ರ ಚಂದ್ರಿಕಾ ಸಂದೇಹ ಸಂಜನನ ಮಂದಸ್ಮಿತೇ, ವಾರಿತಾಶೇಷ ಭಕ್ತಾಸ್ಮಿತೇ, ಸಜ್ಜನ್ಯೈಃ ಶೀಲಿತೇ ॥ ೯ ॥

ಸ್ವಮುಖಾವಲೋಕಾರ್ಥ ಚತುರಾಸ್ಯ ಸಂಸೃಷ್ಟ ವರರತ್ನ ಮುಕುರಾಭಗಂಡ ಸ್ಥಲೀ ಸಂಯುತೇ, ಕೈಶಿಕಾಭಾಸಿ ಸನ್ಮಾಲತೇ ಕುಚಭರೇಷನ್ನತೇ ॥ ೧೦ ॥

ಅಕಲಂಕ ಮುಖಚಂದ್ರ ಸೇವಾ ಸಮಾಯಾತ ವಿಧುಸಂಶಯೋತ್ಪಾದಿ ತಿಲಪುಷ್ಪ ಸಂಕಾಶ ನಾಸಾವಿಭೂಷೇ, ಮನೋಹಾರಿ ವೇಷೇ, ಸರೋಜೋತ್ಥಯೋಷೇ ।

ಕಾರುಣ್ಯ ಮಕರಂದ ಪಾನಾರ್ಥ ಸಂಯಾತ ಷಟ್‌ಚರಣ ಸಂಕಾಶತಾರಕಾ ಸಂಶೋಭಿ ಕಮಲ ಪ್ರತೀಕಾಶ ನಯನ ದ್ವಯಾಭಾಸಿ ವದನೇ, ಧುತ ಕುಂದರದನೇ, ದ್ರುಹಿಣ ಮುಖ ಸದನೇ ॥ ೧೧ ॥

ಸಮಯದಲ್ಲಿ ಸಂಜೆಯ ಸೂರ್ಯನ ಹಿಂದೆ ಮಿಂಚುವ ಮಿಂಚಿನ ಬಳ್ಳಿಯ ಶೋಭೆಯನ್ನೂ ನೀನು ಮೀರಿಸಿ ಪ್ರಕಾಶಿಸುತ್ತೀಯೆ! ದಾನ ಮಾಡುವುದರಲ್ಲಿ ಕಲ್ಪಲತೆಯನ್ನೂ ಮೀರಿಸಿದವಳು ನೀನು. ಬ್ರಹ್ಮದೇವನ ಮೆಚ್ಚುಗೆಯನ್ನು ಗಳಿಸಿದವಳು ನೀನು. ॥ ೮ ॥

ತಾರುಣ್ಯ ಚಂದ್ರೋದಯವಾಗುವಾಗ ನಿನ್ನ ಲಾವಣ್ಯ ಸಮುದ್ರವು ಉಕ್ಕಿ ಹರಿದಿದೆ. ಆಗ ಸಮುದ್ರದಿಂದೆದ್ದ ಶಂಖದಂತೆ ನಿನ್ನ ಕಂಠವೂ ಹವಳದಂತೆ ನಿನ್ನ ತುಟಿಗಳೂ ಇವೆ. ದೇವತೆಗಳು ನಿನ್ನ ಪಾದಸೇವಕರು. ಭೂಸುರರೂ ನಿನ್ನನ್ನು ಪೂಜಿಸುತ್ತಾರೆ. ನಿನ್ನ ಮುಗುಳ್ನಗೆಯು ಮುಖ-ಚಂದ್ರನ ಬೆಳದಿಂಗಳೋ ಎಂಬ ಸಂದೇಹವನ್ನು ಹುಟ್ಟಿಸುತ್ತದೆ. ಎಲ್ಲ ಭಕ್ತಜನರ ಅಹಂಕಾರವನ್ನು ತಡೆದವಳು ನೀನು. ಸಜ್ಜನರಿಂದ ಗೌರವಿಸಲ್ಪಟ್ಟವಳು. ॥ ೯ ॥

(ನಿನ್ನ ಪತಿಯಾದ) ಬ್ರಹ್ಮದೇವನು ತನ್ನ ಮುಖವನ್ನು ನೋಡಿಕೊಳ್ಳುವುದಕ್ಕಾಗಿ ನಿರ್ಮಿಸಿಕೊಂಡ ಶ್ರೇಷ್ಠವಾದ ರತ್ನಗನ್ನಡಿ-ಯಂತಹ ಕಪೋಲವುಳ್ಳವಳೆ, ಕೇಶರಾಶಿಯಲ್ಲಿ ವಿರಾಜಿಸುವ ಉತ್ತಮ-ವಾದ ಜಾಜಿಹೂವನ್ನು ಮುಡಿದವಳೆ, ಕುಚಭಾರದಿಂದ ಕೊಂಚ ಬಾಗಿದವಳೆ. ॥ ೧೦ ॥

ಕಳಂಕರಹಿತವಾದ ನಿನ್ನ ಮುಖವೆಂಬ ಚಂದ್ರನನ್ನು ಸೇವಿಸುವುದಕ್ಕಾಗಿ ಬಂದ (ಕಳಂಕಸಹಿತ) ಚಂದ್ರನೋ ಎಂಬ ಸಂಶಯವನ್ನುಂಟು ಮಾಡುವ, ತಿಲಪುಷ್ಪದಂತೆ ಕಾಣುವ ನಾಸಾಭರಣವನ್ನು ಧರಿಸಿದವಳೆ, ಮನೋಹರವಾದ ವಸ್ತ್ರಾಲಂಕಾರಗಳಿಂದ ಶೋಭಿತಳೆ, ಕಮಲಜನಾದ ಬ್ರಹ್ಮನ ರಾಣಿಯೆ! ಕಾರುಣ್ಯವೆಂಬ ಮಕರಂದವನ್ನು ಪಾನ ಮಾಡುವುದಕ್ಕಾಗಿ ಬಂದ ದುಂಬಿಗಳೋ ಎಂಬಂತೆ ಕಾಣುವ ಕಣ್ಣಾಲಿ-ಗಳಿಂದ ಶೋಭಿಸುವ ಕಮಲ ಸದೃಶಗಳಾದ ನೇತ್ರಗಳಿಂದ ಪ್ರಕಾಶಿಸುವ ಮುಖದವಳೆ, ಕುಂದಪುಷ್ಪಗಳನ್ನು ತಿರಸ್ಕರಿಸುವ ದಂತಪಂಕ್ತಿಯುಳ್ಳವಳೆ, ಬ್ರಹ್ಮನ ಮುಖದಲ್ಲಿ ನೆಲಸಿದವಳೆ. ॥ ೧೧ ॥

ಕುಸುಮ ಶರ ಕೋದಂಡ ಹುಂಕಾರಿ ಚಿಲ್ಲಿಕಾ ವಲ್ಲಿಕಾ ಸಂಭೂತ ಸಂದೇಹ-ಕೃನ್ಮೃಗನಾಭಿ ಸಂಕ್ಲುಪ್ತತಿಲಕೇ ಪರಮೇಷ್ಠಿ ಸಂಶ್ಲೇಷ ಸಂಜಾತ ಪುಲಕೇ, ಚಂಚರೀಕಾಲಕೇ ॥ ೧೨ ॥

ಮಲ್ಲಿಕಾ ಮಾಲತೀ ಮುಖ ಕುಸುಮ ಸಂದೋಹ ಸಂಯುಕ್ತ ಕಚವೃಂದ ಸಂಧೂತ ನಕ್ಷತ್ರ ಸಂಕೀರ್ಣ ತಾರಾಪಥೇ, ನಿರ್ವ್ಯಾಜ ಕಾರುಣ್ಯ ಘಂಟಾಪಥೇ, ಯೋಗಿ ಚಿತ್ತಾತಿಥೇ ॥ ೧೩ ॥

ಶಾರದೇ, ಪಾರದೇ ದುಃಖವಾರಾಂ ನಿಧೇ, ಪಾರದಾಚ್ಛ ಪ್ರಭೇ ನಾರದಾದಿ ಸ್ತುತೇ, ಪೂರಿತಾಶೇಷ ಲೋಕೇಪ್ಸಿತೇ, ವಾರಿತಾನೇಕ ರಕ್ಷೋಗಣೇ, ದಾರಿತಾಹಾರ್ಯ ಮೋಹಾಕರೇ, ತಾರಿತಾಶೇಷ ಭಕ್ತಾವಲೇ ॥ ೧೪ ॥

ಸರ್ವ ದೇವಾತ್ಮಿಕೇ, ಸರ್ವ ವಿಪ್ರಾತ್ಮಿಕೇ, ಸರ್ವಲೋಕಾತ್ಮಿಕೇ, ಸರ್ವ ಶಾಸ್ತ್ರಾತ್ಮಿಕೇ, ಸರ್ವ ವಸ್ತ್ವಾತ್ಮಿಕೇ ಪಾಹಿ ಮಾಂ ಪಾಹಿ ಮಾಂ ಮೋಹಿತಂ ಮಾಯಯಾ, ದೇಹಿ ಮೇ ಭೃತ್ಯತಾಂ ತ್ವತ್ಪದಾಂಭೋಜಯೋಃ ಕೋ ಹಿತಂ ಮೇ ತನೋತ್ಯಂಬಿಕೇ ತ್ವಾಂ ವಿನಾ, ಧೇಹಿ ಶೀರ್ಷೇ ಪದಂ ಮಾಮಕೇ ತಾವಕಂ, ಭಾಹಿ ಮನ್ಮಾನಸೇ ಸಂತತಂ ಭಾರತಿ, ತ್ರಾಹಿ ಮಾಂ ಸಂಸ್ಮೃತೇ ಹೇ ದುಃಖ ಜನ್ಮಾವನೇಃ ದೇಹಿ ಮೇ ಸಂವಿದಂ ಸಂಮುದಂ ಶಾಶ್ವತೀಂ ನಮಸ್ತೇ ನಮಸ್ತೇ ನಮಃ ॥ ೧೫ ॥

ಇತಿ ಶ್ರೀ ಶೃಂಗಗಿರಿ ಜಗದ್ಗುರು ಶ್ರೀ ಚಂದ್ರಶೇಖರಭಾರತೀ ಸ್ವಾಮಿಭಿಃ ವಿರಚಿತಂ

ಶ್ರೀ ಶಾರದಾದಂಡಕಂ ಸಮಾಪ್ತಮ್ ॥

ಪುಷ್ಪಬಾಣನಾದ ಮನ್ಮಥನ ಧನುಸ್ಸಿಗಿಂತ ಸುಂದರವಾದ ಹುಬ್ಬು ಎಂಬ ಲತೆಯಲ್ಲಿ ಹುಟ್ಟಿದ ಪುಷ್ಪವೋ ಎಂದು ಸಂದೇಹವನ್ನುಂಟು-ಮಾಡುವ ಕಸ್ತೂರೀತಿಲಕವನ್ನು ಧರಿಸಿದವಳು ನೀನು. ಬ್ರಹ್ಮದೇವನ ಆಲಿಂಗನದಿಂದ ರೋಮಾಂಚಗೊಳ್ಳತಕ್ಕವಳು ನೀನು. ನಿನ್ನ ಮುಂಗುರುಳು ದುಂಬಿಯಂತಿದೆ. ॥ ೧೨ ॥

ಮಲ್ಲಿಗೆ, ಜಾಜಿ-ಮುಂತಾದ ಹೂಗಳ ಸಂದೋಹದಿಂದ ತುಂಬಿದ ನಿನ್ನ ಕೇಶರಾಶಿಯು ನಕ್ಷತ್ರಗಳಿಂದ ತುಂಬಿದ (ಕಪ್ಪಾದ) ಗಗನದಂತೆ ಕಾಣುತ್ತಿದೆ. ಕಾರಣವಿಲ್ಲದೆ ಕಾರುಣ್ಯವನ್ನು ಹರಿಸುವ ರಾಜಬೀದಿ-ಯಾಗಿದ್ದೀಯೆ. ಯೋಗಿಗಳ ಚಿತ್ತದಲ್ಲಿ ಅತಿಥಿಯಂತೆ ಸತ್ಕೃತ-ಳಾಗುತ್ತೀಯೆ. ॥ ೧೩ ॥

ಹೇ ಶಾರದೇ, ಶೋಕಸಾಗರವನ್ನು ದಾಟಿಸಿ ಪಾರಗಾಣಿಸತಕ್ಕವಳೆ, ಪಾದರಸದಂತೆ ಸ್ವಚ್ಛಕಾಂತಿಯುಳ್ಳವಳೆ, ನಾರದಾದಿ ಮುನಿಗಳಿಂದ ಸಂಸ್ತುತಳೆ, ಸರ್ವರ ಇಷ್ಟಾರ್ಥಗಳನ್ನೂ ಸಂಪಾದಿಸಿಕೊಡತಕ್ಕವಳೆ, ರಾಕ್ಷಸಗಣಗಳನ್ನು ತಡೆದವಳೆ, ಹೋಗಲಸಾಧ್ಯವಾದ ಅಜ್ಞಾನರಾಶಿಯನ್ನು ಸೀಳಿಹಾಕತಕ್ಕವಳೆ, ಸಮಸ್ತ ಭಕ್ತವೃಂದವನ್ನು ರಕ್ಷಿಸಿದವಳೆ. ॥ ೧೪ ॥

ಹೇ ಸರ್ವದೇವಾತ್ಮಿಕೆ, ಸರ್ವವಿಪ್ರಾತ್ಮಿಕೆ, ಸರ್ವಲೋಕಾತ್ಮಿಕೆ, ಸರ್ವಶಾಸ್ತ್ರಾತ್ಮಿಕೆ, ಸರ್ವವಸ್ತುಸ್ವರೂಪೆ, ನನ್ನನ್ನು ಕಾಪಾಡು, ಮಾಯೆ-ಯಿಂದ ಮೋಹಿತನಾದ ನನ್ನನ್ನು ಕಾಪಾಡು. ನಿನ್ನ ಪಾದಪದ್ಮಗಳನ್ನು ಸೇವಿಸುವ ಭೃತ್ಯಕಾರ್ಯವನ್ನು ನನಗೆ ಅನುಗ್ರಹಿಸಿಕೊಡು, ಹೇ ಅಂಬಿಕೆ, ನಿನ್ನನ್ನು ಬಿಟ್ಟರೆ ನನಗೆ ಹಿತವನ್ನು ಇನ್ನು ಯಾರು ಮಾಡುವರು? ತಾಯೆ, ನನ್ನ ತಲೆಯ ಮೇಲೆ ನಿನ್ನ ಪಾದವನ್ನಿಡು, ಹೇ ಭಾರತಿ, ನನ್ನ ಹೃದಯದಲ್ಲಿ ಸಂತತವಾಗಿ ಪ್ರಕಾಶಿಸುತ್ತಿರು, ಈ ಸಂಸಾರದಿಂದ ನನ್ನನ್ನು ಪಾರುಮಾಡು, ಈ ಸಂಸಾರವು ದುಃಖವು ಹುಟ್ಟುವ ಭೂಮಿ, ನನಗೆ ಶಾಶ್ವತವಾದ ಚಿದಾನಂದವನ್ನು ನೀಡು, ನಮಸ್ತೇ ನಮಸ್ತೇ ನಮಃ ॥ ೧೫ ॥

೫. ಶ್ರೀ ದೇವ್ಯಪರಾಧ ಕ್ಷಮಾಪಣ ಸ್ತೋತ್ರಮ್

ನ ಮಂತ್ರಂ ನೋ ಯಂತ್ರಂ ತದಪಿ ಚ ನ ಜಾನೇ ಸ್ತುತಿಮಹೋ
ನ ಚಾಹ್ವಾನಂ ಧ್ಯಾನಂ ತದಪಿ ಚ ನ ಜಾನೇ ಸ್ತುತಿಕಥಾಃ ।
ನ ಜಾನೇ ಮುದ್ರಾಸ್ತೇ ತದಪಿ ಚ ನ ಜಾನೇ ವಿಲಪನಂ
ಪರಂ ಜಾನೇ ಮಾತಸ್ತ್ವದನುಸರಣಂ ಕ್ಲೇಶಹರಣಮ್ ॥ ೧ ॥

ವಿಧೇರಜ್ಞಾನೇನ ದ್ರವಿಣ ವಿರಹೇಣಾಲಸತಯಾ
ವಿಧೇಯಾಶಕ್ಯತ್ವಾತ್ತವ ಚರಣಯೋರ್ಯಾ ಚ್ಯುತಿರಭೂತ್ ।
ತದೇತತ್ ಕ್ಷಂತವ್ಯಂ ಜನನಿ ಸಕಲೋದ್ಧಾರಿಣಿ ಶಿವೇ
ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ॥ ೨ ॥

ಪೃಥಿವ್ಯಾಂ ಪುತ್ರಾಸ್ತೇ ಜನನಿ ಬಹವಃ ಸಂತಿ ಸರಲಾಃ
ಪರಂ ತೇಷಾಂ ಮಧ್ಯೇ ವಿರಲ ತರಲೋಽಹಂ ತವ ಸುತಃ ।
ಮದೀಯೋಽಯಂ ತ್ಯಾಗಃ ಸಮುಚಿತಮಿದಂ ನೋ ತವ ಶಿವೇ
ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ॥ ೩ ॥

ಜಗನ್ಮಾತರ್ಮಾತಸ್ತವ ಚರಣಸೇವಾ ನ ರಚಿತಾ
ನ ವಾ ದತ್ತಂ ದೇವಿ ದ್ರವಿಣಮಪಿ ಭೂಯಸ್ತವ ಮಯಾ ।
ತಥಾಪಿ ತ್ವಂ ಸ್ನೇಹಂ ಮಯಿ ನಿರುಪಮಂ ಯತ್ ಪ್ರಕುರುಷೇ
ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ॥ ೪ ॥

ಶ್ರೀ ದೇವ್ಯಪರಾಧ ಕ್ಷಮಾಪಣ ಸ್ತೋತ್ರಮ್

ಓ ತಾಯಿ, ನಾನು ಮಂತ್ರವನ್ನರಿಯೆ, ಯಂತ್ರವೂ ಗೊತ್ತಿಲ್ಲ, ಸ್ತುತಿಯೂ ತಿಳಿಯದು. ಅಯ್ಯೋ, ಆವಾಹನೆ ಧ್ಯಾನ ಸ್ತೋತ್ರವಿರುವ ನಿನ್ನ ಕಥೆಗಳು ಒಂದೂ ನನಗೆ ತಿಳಿದಿಲ್ಲ. ನಿನ್ನ ಮುದ್ರೆಗಳನ್ನೂ ನಾನು ಅರಿಯೆ. ನಿನಗೋಸ್ಕರ ಅಳುವುದಕ್ಕೆ ಸಹ ನನಗೆ ಬಾರದು! ಆದರೆ ಕಷ್ಟವನ್ನು ಪರಿಹರಿಸತಕ್ಕದ್ದು ನಿನ್ನ ಸೇವೆ ಎಂದು ಮಾತ್ರ ನನಗೆ ಗೊತ್ತಿದೆ. ॥ ೧ ॥

ಶಾಸ್ತ್ರವಿಧಿಯನ್ನು ತಿಳಿಯದೇ ಹೋದದ್ದರಿಂದಲೋ, ಹಣದ ಅಭಾವದಿಂದಲೋ ಅಥವಾ ಸೋಮಾರಿತನದಿಂದಲೋ ನಾನು ಕರ್ತವ್ಯವನ್ನು ಮಾಡದೇ ಹೋದದ್ದರಿಂದ ನಿನ್ನ ಪಾದಸೇವೆಯಲ್ಲಿ ಲೋಪವು ಆಗಿದೆ. ಅದನ್ನು ಓ ತಾಯಿ, ಸಕಲರನ್ನೂ ಉದ್ಧಾರ ಮಾಡತಕ್ಕವಳೆ, ಹೇ ಶಿವೇ, ಕ್ಷಮಿಸಬೇಕು. ಕೆಟ್ಟ ಮಗನು ಹುಟ್ಟಬಹುದು, ಕೆಟ್ಟ ತಾಯಿಯು ಮಾತ್ರ ಎಂದಿಗೂ ಇರುವುದಿಲ್ಲ. ॥ ೨ ॥

ಹೇ ಜನನಿ, ಈ ಜಗತ್ತಿನಲ್ಲಿ ಸಾಧುಸ್ವಭಾವದ ಬಹುಮಂದಿ ಪುತ್ರರು ನಿನಗಿದ್ದಾರೆ. ನಿನ್ನ ಮಕ್ಕಳಲ್ಲಿ ನಾನು ಅತ್ಯಂತ ವಿಲಕ್ಷಣನಾದವನು. ನನ್ನನ್ನು ತ್ಯಜಿಸುವುದು ಎಂದಿಗೂ ನಿನಗೆ ಉಚಿತವಲ್ಲ. ಮಗನು ಕೆಟ್ಟವನಾಗಿರ-ಬಹುದು. ಆದರೆ ತಾಯಿಯು ಮಾತ್ರ ಎಂದಿಗೂ ಕೆಟ್ಟವಳಾಗಿರುವುದಿಲ್ಲ. ॥ ೩ ॥

ಅಮ್ಮ, ನೀನು ಜಗತ್ತಿಗೇ ತಾಯಿಯಾದವಳು. ನಿನ್ನ ಪಾದಸೇವೆ-ಯನ್ನು ನಾನು ಮಾಡಲಿಲ್ಲ. ನಿನಗಾಗಿ, ಹೇ ದೇವಿ, ನಾನು ಹಣವನ್ನು ವ್ಯಯಮಾಡಲಿಲ್ಲ. ಆದರೂ ಸಹ ನೀನು ನನ್ನಲ್ಲಿ ಅಸಾಧಾರಣವಾದ ವಾತ್ಸಲ್ಯವನ್ನು ತೋರಿಸುತ್ತಲೇ ಇದ್ದೀಯೆ. ಇದರಿಂದಲೇ ತಿಳಿಯುತ್ತದೆ. ಲೋಕದಲ್ಲಿ ದುಷ್ಟಪುತ್ರನು ಹುಟ್ಟಬಹುದು. ದುಷ್ಟಮಾತೆಯು ಎಂದಿಗೂ ಇರುವುದಿಲ್ಲ. ॥ ೪ ॥

ಪರಿತ್ಯಕ್ತಾ ಸೇವಾ ವಿವಿಧವಿಧಿ ಸೇವಾಕುಲತಯಾ
    ಮಯಾ ಪಂಚಾಶೀತೇರಧಿಕಮಪನೀತೇ ತು ವಯಸಿ ।
ಇದಾನೀಂ ಚೇನ್ಮಾತಸ್ತವ ಯದಿ ಕೃಪಾ ನಾಪಿ ಭವಿತಾ
    ನಿರಾಲಂಬೋ ಲಂಬೋದರಜನನಿ ಕಂ ಯಾಮಿ ಶರಣಮ್ ॥ ೫ ॥

ಶ್ವಪಾಕೋ ಜಲ್ಪಾಕೋ ಭವತಿ ಮಧುಪಾಕೋಪಮಗಿರಾ
    ನಿರಾತಂಕೋ ರಂಕೋ ವಿಹರತಿ ಚಿರಂ ಕೋಟಿ ಕನಕೈಃ ।
ತವಾಪರ್ಣೇ ಕರ್ಣೇ ವಿಶತಿ ಮನುವರ್ಣೇ ಫಲಮಿದಂ
    ಜನಃ ಕೋ ಜಾನೀತೇ ಜನನಿ ಜಪನೀಯಂ ತವ ವಿಧೌ ॥ ೬ ॥

ಚಿತಾಭಸ್ಮಾಲೇಪೋ ಗರಲಮಶನಂ ದಿಕ್ಪಟಧರೋ
    ಜಟಾಧಾರೀ ಕಂಠೇ ಭುಜಗಪತಿಹಾರೀ ಪಶುಪತಿಃ ।
ಕಪಾಲೀ ಭೂತೇಶೋ ಭಜತಿ ಜಗದೀಶೈಕ ಪದವೀಂ
    ಭವಾನಿ ತ್ವತ್ಪಾಣಿಗ್ರಹಣ ಪರಿಪಾಟೀ ಫಲಮಿದಮ್ ॥ ೭ ॥

ನ ಮೋಕ್ಷಸ್ಯಾಕಾಂಕ್ಷಾ ಭವವಿಭವ ವಾಂಛಾಪಿ ಚ ನ ಮೇ
    ನ ವಿಜ್ಞಾನಾಪೇಕ್ಷಾ ಶಶಿಮುಖಿ ಸುಖೇಚ್ಛಾಪಿ ನ ಪುನಃ ।
ಅತಸ್ತ್ವಾಂ ಸಂಯಾಚೇ ಜನನಿ ಜನನಂ ಯಾತು ಮಮ ವೈ
    ಮೃಡಾನೀ ರುದ್ರಾಣೀ ಶಿವ ಶಿವ ಭವಾನೀತಿ ಜಪತಃ ॥ ೮ ॥

ನಾನಾ ವಿಧವಾದ ವಿಧಿಗಳಿಗೆ ಅನುಸಾರವಾಗಿ ಸೇವೆಯನ್ನು ಮಾಡಲಾರದೆ ನಾನು ಎಲ್ಲ ದೇವತೆಗಳ ಪೂಜಾದಿಗಳನ್ನು ಬಿಟ್ಟುಬಿಟ್ಟೆನು. ಈಗ ನನ್ನ ವಯಸ್ಸು ಎಂಬತ್ತೈದು ವರ್ಷ ಕಳೆದುಹೋಯಿತು. ಈ ಸಮಯದಲ್ಲಿ ಓ ತಾಯಿ, ಗಣಪತಿ ಸ್ವಾಮಿಯ ಮಾತೆ, ನೀನು ನನ್ನ ಮೇಲೆ ದಯೆಯನ್ನು ತೋರಿಸದೆ ಹೋದರೆ, ನಾನು ಅನಾಥನಾಗಿ ಬಿಡುತ್ತೇನೆ. ನಿನ್ನನ್ನು ಬಿಟ್ಟು ಇನ್ನು ಯಾರಿಗೆ ಶರಣಾಗಲಿ? ॥ ೫ ॥

ಹೇ ಅಪರ್ಣೆ, ನಿನ್ನ ಮಂತ್ರಾಕ್ಷರವು- ನಾಮವು ಕಿವಿಗೆ ಕೇಳಿದರೆ ಸಾಕು, ಅವನು ಚಂಡಾಲನಾದರೂ ಜೇನು ತುಪ್ಪದಂತೆ ಮಧುರವಾದ ಮಾತುಗಳನ್ನಾಡುವ ದೊಡ್ಡ ವಾಗ್ಮಿಯೇ ಆಗಿಬಿಡುತ್ತಾನೆ. ಎಂತಹ ದಟ್ಟದರಿದ್ರನಾದರೂ ಆತಂಕವಿಲ್ಲದೆ ಕೋಟ್ಯಧೀಶನಾದ ಶ್ರೀಮಂತನಾಗಿ ವಿಹರಿಸುತ್ತಾನೆ. ಇದು ಜಪಿಸಬೇಕಾದ ನಿನ್ನ ನಾಮಜಪದ ಫಲ. ಇದು ಯಾರಿಗೆ ಗೊತ್ತಿದೆ? ॥ ೬ ॥

ಹೇ ಭವಾನಿ, ಶಿವನ ಪತ್ನಿಯೇ, ಶಿವನು ಚಿತಾಭಸ್ಮವನ್ನು ಮೈಗೆ ಬಳಿದುಕೊಳ್ಳುತ್ತಿದ್ದವನು. (ತಿನ್ನುವುದಕ್ಕೆ ಇಲ್ಲದೆ) ವಿಷವನ್ನು ಕುಡಿದ-ವನು, ದಿಗಂಬರ, ಜಟೆ ಬಿಟ್ಟವನು, ಕೊರಳಿಗೆ ಸರ್ಪವನ್ನು ಹಾರದಂತೆ ಸುತ್ತಿಕೊಂಡವನು. ಅಲ್ಲದೆ ಪಶುಪತಿ (ದನ ಕಾಯುವವನು). ಸತ್ತವರ ತಲೆ ಬುರುಡೆಯನ್ನು ಹಿಡಿದುಕೊಂಡು ಅಲೆಯುತ್ತಿದ್ದವನು. ಭೂತಗಳ ಒಡೆಯ, ಇಂಥವನು ಈಗ ಜಗದೀಶ್ವರನಾಗಿ ದೊಡ್ಡ ಪದವಿಯನ್ನೇರಿ-ಬಿಟ್ಟಿದ್ದಾನೆ. ದೇವಿ, ಇದೆಲ್ಲವೂ ನೀನು ಅವನ ಕೈಹಿಡಿದುದರ ಅದ್ಭುತವಾದ ಫಲ! ॥ ೭ ॥

ನನಗೆ ಮೋಕ್ಷದ ಬಯಕೆ ಇಲ್ಲ. ಈ ಸಂಸಾರದಲ್ಲಿ ವೈಭವದಿಂದ ಇರಬೇಕೆಂಬ ಇಚ್ಛೆಯೂ ಇಲ್ಲ. ವಿಶೇಷವಾಗಿ ಜ್ಞಾನವನ್ನು ಪಡೆಯುವ ಉದ್ದೇಶವೂ ಇಲ್ಲ. ಹೇ ಚಂದ್ರಮುಖಿ, ಸುಖದ ಹಂಬಲವೂ ಇಲ್ಲ. ಆದ್ದರಿಂದ, ತಾಯಿ, ನಾನು ಇಷ್ಟನ್ನು ಮಾತ್ರ ಬೇಡಿಕೊಳ್ಳುತ್ತೇನೆ. ಏನೆಂದರೆ, ನನ್ನ ಈ ಜನ್ಮವು ಪೂರ್ತಿಯಾಗಿ ಮೃಡಾನಿ, ರುದ್ರಾಣಿ, ಶಿವ

ನಾರಾಧಿತಾಸಿ ವಿಧಿನಾ ವಿವಿಧೋಪಚಾರೈಃ

ಕಿಂ ರೂಕ್ಷಚಿಂತನಪರೈರ್ನ ಕೃತಂ ವಚೋಭಿಃ ।

ಶ್ಯಾಮೇ ತ್ವಮೇವ ಯದಿ ಕಿಂಚನ ಮಯ್ಯನಾಥೇ

ಧತ್ಸೇ ಕೃಪಾಮುಚಿತಮಂಬ ಪರಂ ತವೈವ ॥ ೯ ॥

ಆಪತ್ಸು ಮಗ್ನಃ ಸ್ಮರಣಂ ತ್ವದೀಯಂ

ಕರೋಮಿ ದುರ್ಗೇ ಕರುಣಾರ್ಣವೇಶಿ ।

ನೈತಚ್ಛಠತ್ವಂ ಮಮ ಭಾವಯೇಥಾಃ

ಕ್ಷುಧಾ ತೃಷಾರ್ತಾ ಜನನೀಂ ಸ್ಮರಂತಿ ॥ ೧೦ ॥

ಜಗದಂಬ ವಿಚಿತ್ರಮತ್ರ ಕಿಂ

ಪರಿಪೂರ್ಣಾ ಕರುಣಾಸ್ತಿ ಚೇನ್ಮಯಿ ।

ಅಪರಾಧ ಪರಂಪರಾವೃತಂ

ನ ಹಿ ಮಾತಾ ಸಮುಪೇಕ್ಷತೇ ಸುತಮ್ ॥ ೧೧ ॥

ಮತ್ಸಮಃ ಪಾತಕೀ ನಾಸ್ತಿ ಪಾಪಘ್ನೀ ತ್ವತ್ಸಮಾ ನಹಿ ।

ಏವಂ ಜ್ಞಾತ್ವಾ ಮಹಾದೇವಿ ಯಥಾಯೋಗ್ಯಂ ತಥಾ ಕುರು ॥ ೧೨ ॥

ಇತಿ ಶ್ರೀ ದೇವ್ಯಪರಾಧಕ್ಷಮಾಪಣ ಸ್ತೋತ್ರಮ್ ॥

ಶಿವ, ಭವಾನಿ ಎಂದು ನಾಮಜಪವನ್ನು ಮಾಡುತ್ತಲೇ ಕಳೆದುಹೋಗಲಿ! ॥ ೮ ॥

ಅಮ್ಮ, ವಿಧಿಪೂರ್ವಕ ನಾನಾ ಬಗೆಯ ಉಪಚಾರಗಳಿಂದ ನಿನ್ನನ್ನು ನಾನು ಪೂಜಿಸಲಿಲ್ಲ. ಕೆಟ್ಟ ಚಿಂತನೆಗಳನ್ನು ಒಳಗೊಂಡ ಮಾತುಗಳಿಂದ ನಾನು ಮಾಡದಿರುವ ಕೆಲಸವಾದರೂ ಯಾವುದು? ಹೇ ಶ್ಯಾಮಲೆ, ದೇವಿ, ಆದರೂ ಅನಾಥನಾದ ನನ್ನಲ್ಲಿ ಕೃಪೆಯನ್ನು ತೋರಿಸುತ್ತಿರುವೆ. ಅಮ್ಮ, ಇದು ನಿನಗೆ ಮಾತ್ರ=ತಾಯಿಯಾದ ನಿನಗೆ ಉಚಿತವಾದದ್ದು. ॥ ೯ ॥

ಹೇ ದುರ್ಗಾದೇವಿ, ಆಪತ್ತುಗಳಲ್ಲಿ ಸಿಕ್ಕಿದ ನಾನು ಈಗ ನಿನ್ನ ಸ್ಮರಣೆಯನ್ನು ಮಾಡಿಕೊಳ್ಳುತ್ತಿದ್ದೇನೆ. ದಯಾಸಾಗರಳೆ, ಮಹೇಶ್ವರಿ, ಇದರಿಂದ ನಾನು ಖಳಪುರುಷನೆಂದು ಭಾವಿಸಬೇಡ! ಹಸಿವೂ, ಬಾಯಾರಿಕೆಯೂ ಆದಾಗ ಮಕ್ಕಳು ತಾಯಿಯನ್ನು ಸ್ಮರಿಸಿ ಕೊಳ್ಳುತ್ತಾರಲ್ಲವೆ! ॥ ೧೦ ॥

ಹೇ ಜಗನ್ಮಾತೆ, ನನ್ನಲ್ಲಿ ನಿನಗೆ ಕರುಣೆಯು ತುಂಬಿದೆ. ಇದು ಹೌದಾದರೆ ವಿಚಿತ್ರವಾದರೂ ಏನು? ಮಗನು ಅಪರಾಧಗಳನ್ನು ಮೇಲಿಂದ ಮೇಲೆ ಮಾಡುತ್ತಲೇ ಇದ್ದರೂ ತಾಯಿಯು ಮಗನನ್ನು ಉಪೇಕ್ಷಿಸಿ ಬಿಟ್ಟುಬಿಡುವುದಿಲ್ಲ. ॥ ೧೧ ॥

ನನ್ನಂತಹ ಪಾಪಿಷ್ಠನು ಇನ್ನೊಬ್ಬನಿಲ್ಲ. ನಿನ್ನಂತಹ ಪಾಪನಾಶಿನಿಯೂ ಮತ್ತೊಬ್ಬರಿಲ್ಲ. ಹೇ ಮಹಾದೇವಿ, ಇದನ್ನು ಅರಿತು ಯೋಗ್ಯವಾದದ್ದನ್ನು ಮಾಡು. ॥ ೧೨ ॥

೬. ಶ್ರೀ ಕಮಲಜ ದಯಿತಾಷ್ಟಕಮ್

ಶೃಂಗಕ್ಷ್ಮಾಭೃನ್ನಿವಾಸೇ ಶುಕ ಮುಖ ಮುನಿಭಿಃ
ಸೇವ್ಯಮಾನಾಂಘ್ರಿಪದ್ಮೇ
ಸ್ವಾಂಗಚ್ಛಾಯಾ ವಿಧೂತಾಮೃತಕರ ಸುರರಾಡ್
ವಾಹನೇ ವಾಕ್ಸವಿತ್ರೀ ।

ಶಂಭು ಶ್ರೀನಾಥ ಮುಖ್ಯಾಮರ ವರ ನಿಕರೈಃ
ಮೋದತಃ ಪೂಜ್ಯಮಾನೇ
ವಿದ್ಯಾಂ ಶುದ್ಧಾಂ ಚ ಬುದ್ಧಿಂ ಕಮಲಜ ದಯಿತೇ
ಸತ್ವರಂ ದೇಹಿ ಮಹ್ಯಮ್ ॥ ೧ ॥

ಕಲ್ಯಾದೌ ಪಾರ್ವತೀಶಃ ಪ್ರವರ ಸುರಗಣ-
ಪ್ರಾರ್ಥಿತಃ ಶ್ರೌತವರ್ತ್ಮ
ಪ್ರಾಬಲ್ಯಂ ನೇತುಕಾಮೋ ಯತಿವರ ವಪುಷಾ-
ಗತ್ಯ ಯಾಂ ಶೃಂಗಶೈಲೇ ।

ಸಂಸ್ಥಾಪ್ಯಾರ್ಚಾಂ ಪ್ರಚಕ್ರೇ ಬಹುವಿಧನುತಿಭಿಃ
ಸಾ ತ್ವಮಿಂದ್ವರ್ಧಚೂಡಾ
ವಿದ್ಯಾಂ ಶುದ್ಧಾಂ ಚ ಬುದ್ಧಿಂ ಕಮಲಜ ದಯಿತೇ
ಸತ್ವರಂ ದೇಹಿ ಮಹ್ಯಮ್ ॥ ೨ ॥

ಪಾಪೌಘಂ ಧ್ವಂಸಯಿತ್ವಾ ಬಹುಜನಿ ರಚಿತಂ
ಕಿಂ ಚ ಪುಣ್ಯಾಲಿ ಮಾರಾತ್
ಸಂಪದ್ಯಾಸ್ತಿಕ್ಯ ಬುದ್ಧಿಂ ಶ್ರುತಿಗುರುವಚನೇ-
ಷ್ವಾದರಂ ಭಕ್ತಿದಾರ್ಢ್ಯಮ್ ।

ಶೃಂಗೇರಿ ಶ್ರೀ ಜಗದ್ಗುರು ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹಭಾರತೀ ಮಹಾಸ್ವಾಮಿಗಳಿಂದ ರಚಿತವಾದ

ಶ್ರೀಕಮಲಜ ದಯಿತಾಷ್ಟಕಮ್

ಹೇ ಶೃಂಗಗಿರಿನಿವಾಸಿನಿ, ಶುಕನೇ ಮೊದಲಾದ ಮುನಿಗಳಿಂದ ಸೇವಿತವಾದ ಪಾದಪದ್ಮವುಳ್ಳವಳೆ, ನಿನ್ನ ಅಂಗಕಾಂತಿಯಿಂದ ಅಮೃತ-ಕಿರಣನಾದ ಚಂದ್ರ ಮತ್ತು ದೇವೇಂದ್ರವಾಹನವಾದ ಐರಾವತ -ಇವುಗಳ ಕಾಂತಿಯನ್ನು ಜಯಿಸಿದವಳೆ, ನೀನು ಶಬ್ದಾಧಿದೇವತೆಯಾಗಿದ್ದೀಯೆ. ಶಿವ, ವಿಷ್ಣು -ಮೊದಲಾದ ದೇವಶ್ರೇಷ್ಠರಿಂದ ಸಂತೋಷಪೂರ್ವಕವಾಗಿ ಪೂಜಿಸಲ್ಪಡತಕ್ಕವಳೆ, ಕಮಲಜದಯಿತೇ (ವಿಷ್ಣುವಿನ ನಾಭಿ) ಕಮಲ-ದಿಂದ ಹುಟ್ಟಿದ ಬ್ರಹ್ಮದೇವನ ರಾಣಿಯೆ- ಶಾರದೆ, ಸರಿಯಾದ ವಿದ್ಯೆಯನ್ನೂ ಶುದ್ಧವಾದ ಬುದ್ಧಿಯನ್ನೂ ಶೀಘ್ರವಾಗಿ ನನಗೆ ಅನುಗ್ರಹಿಸು. ॥ ೧ ॥

ಕಲಿಯುಗದ ಆದಿಯಲ್ಲಿ ಶ್ರೇಷ್ಠರಾದ ದೇವತೆಗಳಿಂದ ಪ್ರಾರ್ಥಿಸಲ್ಪಟ್ಟ ಪಾರ್ವತೀಪತಿಯಾದ ಪರಶಿವನು ವೇದಮಾರ್ಗವನ್ನು ಪ್ರಬಲವಾಗಿ ಸ್ಥಾಪಿಸುವುದಕ್ಕಾಗಿ ಯತೀಶ್ವರ ರೂಪಧಾರಿಯಾಗಿ (ಶ್ರೀಶಂಕರಾಚಾರ್ಯ-ರಾಗಿ) ಭೂಮಿಯಲ್ಲವತರಿಸಿ ಶೃಂಗಗಿರಿಯಲ್ಲಿ ನಿನ್ನನ್ನು ಸ್ಥಾಪಿಸಿ ನಾನಾವಿಧ ಸ್ತುತಿಗಳಿಂದ ಪೂಜೆ ಮಾಡಿದನು. ಅರ್ಧಚಂದ್ರಶೇಖರೆ-ಯಾದ ನೀನು ಅಂತಹ ಮಹಾಮಹಿಮೆಯುಳ್ಳವಳು. ಹೇ ಕಮಲಜ-ದಯಿತೆ, ಸರಿಯಾದ ವಿದ್ಯೆಯನ್ನೂ ಶುದ್ಧವಾದ ಬುದ್ಧಿಯನ್ನೂ ಶೀಘ್ರವಾಗಿ ನನಗೆ ಅನುಗ್ರಹಿಸು. ॥ ೨ ॥

ಬಹುಜನ್ಮಗಳಲ್ಲಿ ನಾನು ಮಾಡಿರುವ ಪಾಪರಾಶಿಗಳನ್ನು ಧ್ವಂಸ-ಮಾಡು. ಮತ್ತು ಪುಣ್ಯರಾಶಿಯನ್ನು ನಾನು ಸಂಪಾದಿಸುವಂತೆ ಪ್ರೇರಿಸಿ ನನ್ನಲ್ಲಿ ಆಸ್ತಿಕ್ಯಬುದ್ಧಿಯನ್ನುಂಟು ಮಾಡು. ವೇದಗಳಲ್ಲಿಯೂ ಗುರುವಾಕ್ಯ-ಗಳಲ್ಲಿಯೂ ಆದರವನ್ನೂ, ದೇವರಲ್ಲಿಯೂ ಆಚಾರ್ಯರಲ್ಲಿಯೂ ಬ್ರಾಹ್ಮಣರಲ್ಲಿಯೂ ಧೃಢವಾದ ಭಕ್ತಿಯನ್ನೂ ಕೊಡು. ನಿನ್ನವನಾದ

ದೇವಾಚಾರ್ಯ ದ್ವಿಜಾತಿಷ್ವಪಿ ಮನುನಿವಹೈಃ
   ತಾವಕೀನೈರ್ ನಿತಾಂತಂ
ವಿದ್ಯಾಂ ಶುದ್ಧಾಂ ಚ ಬುದ್ಧಿಂ ಕಮಲಜ ದಯಿತೇ
   ಸತ್ವರಂ ದೇಹಿ ಮಹ್ಯಮ್ ॥ ೩ ॥

ವಿದ್ಯಾಮುದ್ರಾಕ್ಷಮಾಲಾಮೃತ ಘಟ ವಿಲಸತ್
   ಪಾಣಿಪಾಥೋಜಜಾಲೇ
ವಿದ್ಯಾದಾನ ಪ್ರವೀಣೇ ಜಡ ಬಧಿರ ಮುಖೇ-
   ಭ್ಯೋಽಪಿ ಶೀಘ್ರಂ ನತೇಭ್ಯಃ ।

ಕಾಮಾದೀನಾಂತರಾನ್ ಮತ್ಸಹಜ ರಿಪುವರಾನ್
   ದೇವಿ ನಿರ್ಮೂಲ್ಯ ವೇಗಾದ್
ವಿದ್ಯಾಂ ಶುದ್ಧಾಂ ಚ ಬುದ್ಧಿಂ ಕಮಲಜ ದಯಿತೇ
   ಸತ್ವರಂ ದೇಹಿ ಮಹ್ಯಮ್ ॥ ೪ ॥

ಕರ್ಮಸ್ವಾತ್ಮೋಚಿತೇಷು ಸ್ಥಿರತರ ಧಿಷಣಾಂ
   ದೇಹದಾರ್ಢ್ಯಂ ತದರ್ಥಂ
ದೀರ್ಘಂ ಚಾಯುರ್ ಯಶಶ್ಚ ತ್ರಿಭುವನ ವಿದಿತಂ
   ಪಾಪಮಾರ್ಗಾದ್ ವಿರಕ್ತಿಮ್ ।

ಸತ್ಸಂಗಂ ಸತ್ಕಥಾಯಾಃ ಶ್ರವಣಮಪಿ ಸದಾ
   ದೇವಿ ದತ್ವಾ ಕೃಪಾಬ್ಧೇ
ವಿದ್ಯಾಂ ಶುದ್ಧಾಂ ಚ ಬುದ್ಧಿಂ ಕಮಲಜ ದಯಿತೇ
   ಸತ್ವರಂ ದೇಹಿ ಮಹ್ಯಮ್ ॥ ೫ ॥

ಮಾತಸ್ ತ್ವತ್ಪಾದ ಪದ್ಮಂ ನವ ವಿಧಿಕುಸುಮೈಃ
   ಪೂಜಿತಂ ಜಾತು ಭಕ್ತ್ಯಾ
ಗಾತುಂ ನೈವಾಹಮೀಶೇ ಜಡಮತಿರಲಸಃ
   ತ್ವದ್ಗುಣಾನ್ ದಿವ್ಯಪದ್ಯೈಃ ।

ನನ್ನಲ್ಲಿ ಅನೇಕ ಮಂತ್ರಗಳ ಜೊತೆಗೆ ಭಕ್ತಿದಾರ್ಢ್ಯವನ್ನೂ ಅನುಗ್ರಹಿಸು. ಹೇ ಕಮಲಜದಯಿತೆ, ಶುದ್ಧವಾದ ವಿದ್ಯಾಬುದ್ಧಿಗಳನ್ನು ಶೀಘ್ರವಾಗಿ ನನಗೆ ಅನುಗ್ರಹಿಸು. ॥ ೩ ॥

ಕರಕಮಲಗಳಲ್ಲಿ ವಿದ್ಯಾಮುದ್ರೆ, ಅಕ್ಷಮಾಲೆ, ಅಮೃತಕಲಶಗಳನ್ನು ಧರಿಸಿದವಳೆ, ನಿನಗೆ ನಮಸ್ಕರಿಸುತ್ತ ಭಕ್ತರಾದ ಜಡಮನುಷ್ಯ ಮೊದಲಾದವರಿಗೂ ವಿದ್ಯಾದಾನ ಮಾಡುವುದರಲ್ಲಿ ಪ್ರವೀಣಳಾದವಳೆ, ನನ್ನ ಅಂತರಂಗದಲ್ಲಿ ಅಡಗಿಕೊಂಡಿರುವ ಸಹಜರಿಪುಗಳಾದ ಕಾಮ, ಕ್ರೋಧ, ಲೋಭ, ಮೋಹ, ಮದ, ಮಾತ್ಸರ್ಯಗಳನ್ನು ನಾಶಪಡಿಸಿ, ಶುದ್ಧವಾದ ವಿದ್ಯಾಬುದ್ಧಿಗಳನ್ನು ಶೀಘ್ರವಾಗಿ ನನಗೆ ಅನುಗ್ರಹಿಸು. ॥ ೪ ॥

ನನಗೆ ಸ್ವಧರ್ಮೋಚಿತವಾದ ಕರ್ಮಗಳಲ್ಲಿ ಸ್ಥಿರವಾದ ವಿಶ್ವಾಸ-ಬುದ್ಧಿಯನ್ನೂ, ಅದಕ್ಕೆ ತಕ್ಕ ದೇಹದಾರ್ಢ್ಯವನ್ನೂ, ದೀರ್ಘಾಯಸ್ಸು, ಲೋಕವಿಖ್ಯಾತ ಕೀರ್ತಿಗಳನ್ನೂ, ಪಾಪಮಾರ್ಗದಿಂದ ದೂರವಿರುವ ವೈರಾಗ್ಯವನ್ನೂ, ಸತ್ಸಂಗವನ್ನೂ, ಸತ್ಕಥೆಗಳನ್ನು ಸದಾ ಶ್ರವಣ ಮಾಡುವ ಅವಕಾಶವನ್ನೂ, ಹೇ ಕೃಪಾಸಾಗರಳೆ, ಶುದ್ಧವಾದ ವಿದ್ಯಾಬುದ್ಧಿಗಳನ್ನೂ ಶೀಘ್ರವಾಗಿ ನನಗೆ ಅನುಗ್ರಹಿಸು. ॥ ೫ ॥

ಹೇ ಮಾತೆ, ಹೊಸ ಹೊಸ ಹೂಗಳನ್ನು ತಂದು ನಿನ್ನ ಪಾದಪದ್ಮಗಳನ್ನು ಭಕ್ತಿಯಿಂದ ನಾನು ಎಂದೂ ಪೂಜಿಸಲಿಲ್ಲ. ಜಡಬುದ್ಧಿಯೂ ಆಲಸ್ಯ ಸ್ವಭಾವದವನೂ ಆದ ನಾನು ದಿವ್ಯಶ್ಲೋಕಗಳಿಂದ ನಿನ್ನ ಗುಣಗಳನ್ನು ಹೊಗಳಲು ಅಶಕ್ತನಾಗಿದ್ದೇನೆ. ಸೇವೆಯನ್ನೂ ಮಾಡದೆ ಮೂಕನಾಗಿರುವ ತನ್ನ ಮಗನಲ್ಲಿ ತಾಯಿಯಾದವಳು ಅಪಾರ ಕಾರುಣ್ಯವನ್ನು ತೋರುವಂತೆ, ನೀನು ನನ್ನಲ್ಲಿ ದಯೆಯನ್ನಿಡು. ಶುದ್ಧವಾದ ವಿದ್ಯಾಬುದ್ಧಿಗಳನ್ನು ಶೀಘ್ರವಾಗಿ ನನಗೆ ಅನುಗ್ರಹಿಸು. ॥ ೬ ॥

ಲಕ್ಷ್ಮೀ ಪಾರ್ವತಿಯರಿಂದ ಸೇವ್ಯಮಾನಳಾದ ಹೇ ಶಾರದೆ, ಶಾಂತಿ ದಾಂತಿ ಉಪರತಿ ತಿತಿಕ್ಷಾ ಶ್ರದ್ಧಾ ಸಮಾಧಾನಗಳೆಂಬ ಶುಭಕರಗಳಾದ ಆರು ಸಂಪತ್ತುಗಳನ್ನು ನನಗೆ ಅನುಗ್ರಹಿಸು. ನಿತ್ಯವಾಗಿ ಇರಬೇಕಾದ ಇವುಗಳಿಲ್ಲದಂತಹ ಇತರ ಜ್ಞಾನವನ್ನೂ ವೈರಾಗ್ಯವನ್ನೂ ಮೋಕ್ಷಾಪೇಕ್ಷೆ-

ಮೂಕೇ ಸೇವಾ ವಿಹೀನೇಽಪ್ಯನುಪಮ ಕರುಣಾ-
ಮರ್ಭಕೇಽಂಬೇವ ಕೃತ್ವಾ
ವಿದ್ಯಾಂ ಶುದ್ಧಾಂ ಚ ಬುದ್ಧಿಂ ಕಮಲಜ ದಯಿತೇ
ಸತ್ವರಂ ದೇಹಿ ಮಹ್ಯಮ್ ॥ ೬ ॥

ಶಾಂತ್ಯಾದ್ಯಾಃ ಸಂಪದೋ ಮೇ ವಿತರ ಶುಭಕರೀಃ
ನಿತ್ಯ ತದ್ಭಿನ್ನ ಬೋಧಂ
ವೈರಾಗ್ಯಂ ಮೋಕ್ಷವಾಂಛಾಮಪಿ ಲಘು ಕಲಯೀ
ಶ್ರೀ ಶಿವಾಸೇವ್ಯಮಾನೇ ।

ವಿದ್ಯಾತೀರ್ಥಾದಿ ಯೋಗಿ ಪ್ರವರಕರ ಸರೋ-
ಜಾತ ಸಂಪೂಜಿತಾಂಘ್ರೇ
ವಿದ್ಯಾಂ ಶುದ್ಧಾಂ ಚ ಬುದ್ಧಿಂ ಕಮಲಜ ದಯಿತೇ
ಸತ್ವರಂ ದೇಹಿ ಮಹ್ಯಮ್ ॥ ೭ ॥

ಸಚ್ಚಿದ್ ರೂಪಾತ್ಮನೋ ಮೇ ಶ್ರುತಿಮನನ ನಿದಿ-
ಧ್ಯಾಸನಾನ್ಯಾಶು ಮಾತಃ
ಸಂಪಾದ್ಯ ಸ್ವಾಂತಮೇತದ್ ರುಚಿಯುತಮನಿಶಂ
ನಿರ್ವಿಕಲ್ಪೇ ಸಮಾಧೌ ।

ತುಂಗಾತೀರಾಂಕ ರಾಜದ್ ವರಗೃಹ ವಿಲಸಚ್
ಚಕ್ರರಾಜಾಸನಸ್ಥೇ
ವಿದ್ಯಾಂ ಶುದ್ಧಾಂ ಚ ಬುದ್ಧಿಂ ಕಮಲಜ ದಯಿತೇ
ಸತ್ವರಂ ದೇಹಿ ಮಹ್ಯಮ್ ॥ ೮ ॥

ಇತಿ ಶ್ರೀ ಶೃಂಗಗಿರಿ ಜಗದ್ಗುರು ಶ್ರೀ ಶ್ರೀ ಸಚ್ಚಿದಾನಂದ ಶಿವಾಭಿನವ
ನೃಸಿಂಹಭಾರತೀ ಸ್ವಾಮಿಭಿಃ ವಿರಚಿತಂ
ಶ್ರೀ ಕಮಲಜ ದಯಿತಾಷ್ಟಕಂ ಸಂಪೂರ್ಣಮ್ ।

ಯನ್ನೂ ಸಹ ಅಲ್ಪವೆಂದು ನಾನು ಭಾವಿಸುತ್ತೇನೆ. ಶ್ರೀ ವಿದ್ಯಾತೀರ್ಥರೇ ಮೊದಲಾದ ಯೋಗಿ ಶ್ರೇಷ್ಠರ ಕರಸರೋಜಗಳಿಂದ ಪೂಜಿತಳಾದವಳು ನೀನು ಶುದ್ಧವಾದ ವಿದ್ಯಾಬುದ್ಧಿಗಳನ್ನು ಶೀಘ್ರವಾಗಿ ನನಗೆ ಅನುಗ್ರಹಿಸು. ॥ ೭ ॥

ತುಂಗಾನದೀ ತೀರದಲ್ಲಿ ವಿರಾಜಿಸುವ ದಿವ್ಯಭವನದಲ್ಲಿ ಶೋಭಿಸು-ತ್ತಿರುವ ಚಕ್ರರಾಜವೆನಿಸಿದ ಶ್ರೀಚಕ್ರವೆಂಬ ಪೀಠದಲ್ಲಿ ಮಂಡಿಸಿರುವ ಹೇ ಶಾರದೇ ಸಚ್ಚಿತ್ ಸ್ವರೂಪನೇ ಆದ ನನಗೆ ಶ್ರವಣ ಮನನ ನಿದಿಧ್ಯಾಸನ-ಗಳನ್ನು ಶೀಘ್ರವಾಗಿ ಅನುಗ್ರಹಿಸು. ಓ ತಾಯೆ, ಈ ನನ್ನ ಮನಸ್ಸು ನಿರ್ವಿಕಲ್ಪ ಸಮಾಧಿಯಲ್ಲಿ ಆಸಕ್ತವಾಗುವಂತೆ ಮಾಡು. ಶಾರದೆ! ಸರಿಯಾದ ವಿದ್ಯೆಯನ್ನೂ ಶುದ್ಧವಾದ ಬುದ್ಧಿಯನ್ನೂ ಶೀಘ್ರವಾಗಿ ನನಗೆ ದಯಪಾಲಿಸು. ॥ ೮ ॥

✣ ✣ ✣

೭. ಶ್ರೀ ಕಾಮಾಕ್ಷೀ ಸ್ತೋತ್ರಮ್

ತಾಪಿಂಛ ಸ್ತಬಕ ತ್ವಿಷೇ ತನುಭೃತಾಂ
ದಾರಿದ್ರ್ಯಮುದ್ರಾದ್ವಿಷೇ
ಸಂಸಾರಾಖ್ಯ ತಮೋ ಮುಷೇ ಪುರರಿಪೋಃ
ವಾಮಾಂಕ ಸೀಮಾಜುಷೇ ।

ಕಂಪಾತೀರ ಮುಪೇಯುಷೇ ಕವಯತಾಂ
ಜಿಹ್ವಾಕುಟೀಂ ಜಗ್ಮುಷೇ
ವಿಶ್ವತ್ರಾಣಪುಷೇ ನಮೋಽಸ್ತು ಸತತಂ
ತಸ್ಮೈ ಪರಂ ಜ್ಯೋತಿಷೇ ॥ ೧ ॥

ರಾಕಾ ಚಂದ್ರ ಸಮಾನ ಕಾಂತಿ ವದನಾ
ನಾಕಾಧಿರಾಜ ಸ್ತುತಾ
ಮೂಕಾನಾಮಪಿ ಕುರ್ವತೀ ಸುರಧುನೀ
ನೀಕಾಶ ವಾಗ್ ವೈಭವಮ್ ।

ಶ್ರೀ ಕಾಂಚೀ ನಗರೀ ವಿಹಾರ ರಸಿಕಾ
ಶೋಕಾಪಹಂತ್ರೀ ಸತಾಮ್
ಏಕಾ ಪುಣ್ಯ ಪರಂಪರಾ ಪಶುಪತೇ-
ರಾಕಾರಿಣೀ ರಾಜತೇ ॥ ೨ ॥

ಚಂದ್ರಾಪೀಡಾಂ ಚತುರವದನಾಂ
ಚಂಚಲಾಪಾಂಗಲೀಲಾಂ
ಕುಂದಸ್ಮೇರಾಂ ಕುಚಭರನತಾಂ
ಕುಂತಲೋದ್ಧೂತ ಭೃಂಗಾಮ್ ।

ಶ್ರೀಮೂಕಪಂಚಶತ್ಯಾಃ ಸ್ತುತಿಶತಕಾತ್ ಉದ್ಧೃತಮ್

ಶ್ರೀಕಾಮಾಕ್ಷೀ ಸ್ತೋತ್ರಮ್

ಹೊಂಗೆ ಮರದ ಹೂಗೊಂಚಲಿನ ಕಾಂತಿಯುಳ್ಳದ್ದೂ, ಮಾನವರ ಬಡತನವನ್ನು ನಾಶಮಾಡತಕ್ಕದ್ದೂ, ಸಂಸಾರವೆಂಬ ಕತ್ತಲೆಯನ್ನು ಹೋಗಲಾಡಿಸತಕ್ಕದ್ದೂ, ತ್ರಿಪುರಸಂಹಾರಿಯಾದ ಪರಶಿವನ ಎಡಭಾಗದಲ್ಲಿ ರಂಜಿಸತಕ್ಕದ್ದೂ, ಕಂಪಾನದೀತೀರವಾಸಿಯೂ, ಕವಿಗಳ ನಾಲಗೆಯಲ್ಲಿ ಸಂಚರಿಸತಕ್ಕದ್ದೂ, ಜಗದ್ರಕ್ಷಣೆಯ ದೀಕ್ಷೆಯನ್ನು ವಹಿಸಿದ್ದೂ ಆದ ಆ ಪರಂಜ್ಯೋತಿಗೆ ಸರ್ವದಾ ನಮಸ್ಕಾರವಿರಲಿ. ॥ ೧ ॥

ಪರಮೇಶ್ವರನು ಮಾಡಿದ ಅದ್ವಿತೀಯವಾದ ಪುಣ್ಯಪರಂಪರೆಯು ಸ್ತ್ರೀರೂಪವನ್ನು ತಳೆದು ವಿರಾಜಿಸುತ್ತಿದೆ! ಇವಳ ಮುಖಕಾಂತಿಯು ಹುಣ್ಣಿಮೆಯ ಪೂರ್ಣಚಂದ್ರನ ಕಾಂತಿಗೆ ಸಮವಾಗಿದೆ. ಸ್ವರ್ಗಾಧಿಪತಿಯಾದ ದೇವೇಂದ್ರನು ಇವಳನ್ನು ಸ್ತುತಿಸುತ್ತಿದ್ದಾನೆ. ಮೂಕರಿಗೂ ಸಹ ಗಂಗಾ ಪ್ರವಾಹದಂತಹ ವಾಗ್ವೈಭವವನ್ನು ಕೊಡಬಲ್ಲವಳು ಇವಳು. ಶ್ರೀಕಾಂಚೀನಗರದಲ್ಲಿ ವಿಹರಿಸುತ್ತಿರುವ ರಸಿಕಳು. ಸಜ್ಜನರ ಶೋಕವನ್ನು ಪರಿಹರಿಸತಕ್ಕವಳು. ॥ ೨ ॥

ಚಂದ್ರನನ್ನು ಶಿರಸ್ಸಿನಲ್ಲಿ ಧರಿಸಿದವಳೂ ಚತುರವಾಕ್ಯಗಳನ್ನಾಡತಕ್ಕವಳೂ, ಚಂಚಲಾಪಾಂಗಲೀಲೆಯುಳ್ಳವಳೂ, ಮಲ್ಲಿಗೆಯ ಹೂವಿನಂತೆ ಶುಭ್ರವರ್ಣದವಳೂ, ಸ್ತನಭಾರದಿಂದ ಕೊಂಚ ಬಾಗಿದವಳೂ, ದುಂಬಿಗಳನ್ನು ಧಿಕ್ಕರಿಸುವ ಮುಂಗುರುಳಿನಿಂದ ಶೋಭಿತಳೂ, ಮನ್ಮಥವೈರಿಯಾದ ಶಿವನಿಗೂ ಮನ್ಮಥಬಾಧೆಯನ್ನು ಕೆರಳಿಸತಕ್ಕವಳೂ, ಕವಿಗಳ ವಚನಗಳಿಗೆ ಪುಷ್ಟಿಯನ್ನು ನೀಡುವ ಕಲ್ಪಲತೆಯೂ ಆದ ಕಾಮಾಕ್ಷೀದೇವಿಯನ್ನು ಉಪಾಸನೆ ಮಾಡುತ್ತೇನೆ. ॥ ೩ ॥

ಹೇ ಕಾಮಾಕ್ಷಿ, ನಿನ್ನ ವಿಹಾರಲೀಲೆಯನ್ನು ಕಂಡು ಪಂಡಿತೋತ್ತಮರು ನಿನ್ನನ್ನು ತ್ರಿಯಂಬಕ ಗೃಹಿಣಿ, ತ್ರಿಪುರಸುಂದರಿ, ಇಂದಿರೆ, ಕಿರಾತವೇಷಧಾರಿಯಾಗಿದ್ದ ಪರಶಿವನ ಮಡದಿ, ತ್ರಿಪುರಭೈರವಿ, ಭಾರತಿ,

ಮಾರಾರಾತೇರ್ ಮದನಶಿಖಿನಂ
  ಮಾಂಸಲಂ ದೀಪಯಂತೀಂ
ಕಾಮಾಕ್ಷೀಂ ತಾಂ ಕವಿಕುಲಗಿರಾಂ
  ಕಲ್ಪವಲ್ಲೀ ಮುಪಾಸೇ ॥ ೩ ॥

ತ್ರಿಯಂಬಕ ಕುಟುಂಬಿನೀಂ
  ತ್ರಿಪುರ ಸುಂದರೀ ಮಿಂದಿರಾಂ
ಪುಲಿಂದಪತಿ ಸುಂದರೀಂ
  ತ್ರಿಪುರ ಭೈರವೀಂ ಭಾರತೀಮ್ ।
ಮತಂಗಕುಲ ನಾಯಿಕಾಂ
  ಮಹಿಷ ಮರ್ದಿನೀಂ ಮಾತೃಕಾಂ
ಭಣಂತಿ ವಿಬುಧೋತ್ತಮಾ
  ವಿಹೃತಿಮೇವ ಕಾಮಾಕ್ಷಿ ತೇ ॥ ೪ ॥

ಸಮರ ವಿಜಯಕೋಟೀ ಸಾಧಕಾನಂದಧಾಟೀ
  ಮೃದುಗುಣ ಪರಿಪೇಟೀ ಮುಖ್ಯ ಕಾದಂಬವಾಟೀ ।
ಮುನಿನುತ ಪರಿಪಾಟೀ ಮೋಹಿತಾಜಾಂಡ ಕೋಟೀ
  ಪರಮಶಿವ ವಧೂಟೀ ಪಾತು ಮಾಂ ಕಾಮಕೋಟೀ ॥ ೫ ॥

ಇತಿ ಶ್ರೀ ಮೂಕ ಕವಿವಿರಚಿತಂ ಕಾಮಾಕ್ಷೀ ಸ್ತೋತ್ರಂ ಸಂಪೂರ್ಣಮ್ ।

ಮತಂಗಕುಲದ ನಾಯಿಕೆ, ಮಹಿಷಮರ್ದಿನಿ, ನಮ್ಮೆಲ್ಲರ ತಾಯಿ -ಎಂದು ವರ್ಣಿಸುತ್ತಾರೆ. ॥ ೪ ॥

ಯುದ್ಧದಲ್ಲಿ ವಿಜಯವನ್ನುಂಟುಮಾಡತಕ್ಕವಳೂ ಭಕ್ತರ ಆನಂದಕ್ಕೆ ಕಾರಣಳೂ, ಮೃದುಗುಣಗಳಿಗೆ ಆಕರಳೂ, ಕದಂಬವನದಲ್ಲಿ ಮುಖ್ಯ-ಳಾದವಳೂ, ಋಷಿಗಳು ಮಾಡುವ ವಿವಿಧ ವರ್ಣನೆಗಳಿಗೆ ಪಾತ್ರಳೂ, ಬ್ರಹ್ಮಾಂಡವನ್ನೇ ಮರುಳು ಮಾಡುವ ಸಾಮರ್ಥ್ಯ ಉಳ್ಳವಳೂ, ಪರಮೇಶ್ವರನ ಪತ್ನಿಯೂ ಆದ ಕಾಮಕೋಟಿ ದೇವತೆಯು ನನ್ನನ್ನು ಪಾಲಿಸಲಿ. ॥ ೫ ॥

❖ ❖ ❖

ಅದ್ವೈತವಿದ್ಯಾ ಪ್ರತಿಷ್ಠಾನದ ಪ್ರಕಟಣೆಗಳು

೧.	ಪರಮಾರ್ಥ	ಬೆಲೆ
	ಸಂಪಾದಕರು : ಡಾ॥ ಬಿ.ಎಸ್. ರಾಮಕೃಷ್ಣರಾವ್	10/-
೨.	ಶ್ರೀ ಶಾಂಕರಸೂಕ್ತಿ ಮಣಿಹಾರಃ	30/-
	ಲೇಖಕರು : ವಿದ್ವಾನ್ ಎನ್. ರಂಗನಾಥ ಶರ್ಮ	
೩.	ಶ್ರೀ ವಿಷ್ಣುಪಾದಾದಿ ಕೇಶಾಂತ ಸ್ತೋತ್ರಮ್	15/-
	ಅನುವಾದಕರು : ಪ್ರೊ. ಗರ್ಗೇಶ್ವರಿ ವೆಂಕಟಸುಬ್ಬಯ್ಯ	
೪.	ಶ್ರೀ ದೇವೀ ಸ್ತೋತ್ರಮಾಲಾ	15/-
	ಅನುವಾದಕರು : ವಿದ್ವಾನ್ ಎನ್. ರಂಗನಾಥಶರ್ಮ	

ಅಪಾರ ಸಾಹಿತ್ಯ ರಾಶಿಯುಳ್ಳ ಸಂಸ್ಕೃತ ವಾಙ್ಮಯದ ಒಂದು ವಿಶಿಷ್ಟ ಪ್ರಕಾರವು ಸ್ತೋತ್ರ ಸಾಹಿತ್ಯ. ವೇದ ಸಂಹಿತೆಗಳೂ ಒಂದು ರೀತಿಯಲ್ಲಿ ಸ್ತೋತ್ರಗಳೇ. ಅಂದಿನಿಂದ ಇಂದಿನವರೆಗೆ ಅವ್ಯಾಹತವಾಗಿ ಸಮೃದ್ಧ ಗೊಳ್ಳುತ್ತಿರುವ ಈ ಸಾಹಿತ್ಯವು ಉದಾತ್ತ ಭಾವನೆಗಳಿಂದ ತುಂಬಿದ್ದು ಮಾನವನ ಹೃದಯವನ್ನು ಉನ್ನತ ಮಟ್ಟಕ್ಕೆ ಏರಿಸುವಲ್ಲಿ ತುಂಬ ಸಹಕಾರಿಯಾಗಿದೆ. ನಾನಾ ದೇವತೆಗಳನ್ನು ಕುರಿತು ಭಾವುಕರಿಂದ ಬಗೆ ಬಗೆಯಾಗಿ ಬಣ್ಣಿಸಲ್ಪಡುವ ಸ್ತೋತ್ರವೆಲ್ಲದರ ಮುಖ್ಯ ಭಾವನೆಯು ಭಕ್ತಿ. ಇಂತಹ ಸ್ತೋತ್ರಗಳು ಶಬ್ದಾಲಂಕಾರಗಳಿಂದಲೂ ಅರ್ಥಗಾಂಭೀರ್ಯ ದಿಂದಲೂ ಆಪ್ಯಾಯಮಾನವಾಗಿರುತ್ತವೆ. ಸಂಸ್ಕೃತ ಭಾಷೆಯ ಮಾಧುರ್ಯವನ್ನು ಸ್ತೋತ್ರಗಳ ಪಠನ ಮಾತ್ರದಿಂದಲೂ ಅನುಭವಿಸಲು ಸಾಧ್ಯ. ಸಂಗೀತದ ಮೆರುಗು ಮೇಳವಿಸಿದರಂತೂ ಇವಕ್ಕೆ ಸರಿಸಾಟಿಯುಂಟೇ?

'ದೇವನೊಬ್ಬ ನಾಮ ಹಲವು' ಎಂಬಂತೆ ಅನೇಕ ಹೆಸರುಗಳಿಂದ ಸ್ತುತಿಸಲ್ಪಡುವ ದೇವತೆಯು ಒಂದೇ ಪರಬ್ರಹ್ಮವಸ್ತು. ಅಂತೆಯೇ ವ್ಯಾಸ ವಾಲ್ಮೀಕಿ ಕಾಲಿದಾಸ ಶಂಕರಾಚಾರ್ಯರಾದಿಯಾಗಿ ಎಲ್ಲ ಮಹಾಮಹಿಮರೂ ವಿವಿಧ ದೇವತಾ ಸ್ತೋತ್ರಗಳನ್ನು ದಯಪಾಲಿಸಿದ್ದಾರೆ. ಪ್ರಕೃತ ಗ್ರಂಥದಲ್ಲಿ ಇಂತಹ ಏಳು ಸ್ತೋತ್ರಗಳನ್ನು ಸಂಗ್ರಹಿಸಿ ಕನ್ನಡ ಅರ್ಥವನ್ನು ನೀಡಲಾಗಿದೆ. ಇವುಗಳಲ್ಲಿ ಎರಡು ದಂಡಕಗಳಿವೆ. ಒಂದನ್ನು ಮಹಾಕವಿ ಕಾಲಿದಾಸನು ಬರೆದಿದ್ದಾನೆಂದು ಪ್ರತೀತಿ. ಮತ್ತೊಂದರ ಲೇಖಕರು ಶೃಂಗೇರಿಯ ಜಗದ್ಗುರುಗಳಾಗಿದ್ದ ಶ್ರೀ ಶ್ರೀ ಚಂದ್ರಶೇಖರ ಭಾರತೀ ಮಹಾಸ್ವಾಮಿಗಳು.

ನಮ್ಮ ರಾಜ್ಯದ ಹಿರಿಯ ವಿದ್ವಾಂಸರಾಗಿರುವ ಶ್ರೀ ಎನ್. ರಂಗನಾಥ ಶರ್ಮಾ ಅವರು ಇವನ್ನೆಲ್ಲ ಕನ್ನಡಕ್ಕೆ ಅನುವಾದ ಮಾಡಿಕೊಟ್ಟು ತುಂಬ ಉಪಕಾರ ಮಾಡಿದ್ದಾರೆ. ಈ ಸ್ತೋತ್ರಗಳನ್ನೆಲ್ಲ ಕಂಠಪಾಠ ಮಾಡಿ ಆಗಾಗ್ಗೆ ಹೇಳಿಕೊಳ್ಳುತ್ತಿದ್ದರೆ ಉತ್ತಮ ಸಂಸ್ಕಾರ ಉಂಟಾಗುವುದು ನಿಶ್ಚಿತ.

ಪರಿಮಳ ಮುದ್ರಣಾಲಯ, ಹನುಮಂತನಗರ, ಬೆಂಗಳೂರು- 19

ಬೆಲೆ : ರೂ. 15/-